ಅಧ್ಯಧರು.— ನೋಟೀಸ್ ಯಾವಾಗ ಕೊಟ್ಟಿದ್ದೀರಿ?

ಶ್ರೀ ಪಿ. ರಾಮ್‌ದೇವ್.— ಇವತ್ತು ಕೊಟ್ಟಿದ್ದೇನೆ.

ಶ್ರೀ ಭಾಪೂರಾವ್ ದೇಶಪಾಂಡೆ.— ಸಾರಿಗೆ ಸಂಸ್ಥೆಯಲ್ಲಿ ೧೨೦೦ ಜನ ಕಂಡಕ್ಟರ್ಸ್, ಡ್ರೈವರ್ಸ್ ಮತ್ತಿತರನ್ನು ಒಂದನೇ ತಾರೀಖು ಹೋರಾಟ ಮಾಡಿದ್ದರಿಂದ ಕೆಲಸದಿಂದ ತೆಗೆದಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಇವತ್ತು ಬರುತ್ತಿದ್ದಾರೆ. ಅದರ ಜೊತೆಗೆ ನನ್ನ ತಡೆಹಿಡಿಯಲಾದ ಪ್ರಶ್ನೆ ಕೂಡ ಇದೆ.

ಅಧ್ಯಕ್ಷರು.— ಬೇರೆ ರೂಪದಲ್ಲಿ ಕೊಡಿ ಎಂದು ಹೇಳಿದ್ದೇನೆ.

PRESENTATION OF PETITION

SRI M. SHERKHAN.— Sir, I present the following petitions :

1. Petition signed by the citizens of sedem, Gulbarga District regarding dropping the proposol of Railway Link road by the Government while establishing new cement steel plant at Sedadm.
2. Petition signed by the villagers of Kodla, Sedem Taluk, regarding providing drinking water to the Kodla village.

FINANCIAL BUSINESS

Discussion on the voting of Demands for Grants for 1982-83

Demands Nos. 6, 21 & 60

MR. SPEAKER.— Now, the hon. Member Sri M. C. Nanaiah will initiate the discussion on the demand Numbers 6, 21, 60.

(Mr. Deputy Speaker in the Chair)

† ಶ್ರೀ ಎಂ. ಸಿ. ನಾಣಯ್ಯ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ನಾನು ಅರಣ್ಯ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ. ನಮ್ಮ ಹಲವಾರು ಮಿತ್ರರು ಈಗಾಗಲೇ ಕರ್ನಾಟಕ ರಾಜ್ಯದ ಎಲ್ಲಾ ಭಾಗಗಳಲ್ಲೂ ಮಳೆ ಇಲ್ಲ ಮಲೆನಾಡು ಪ್ರದೇಶಗಳಲ್ಲೂ ಮಳೆ ಇಲ್ಲ, ಕುಡಿಯುವ ನೀರಿಗೆ ಅಭಾವವಾಗಿದೆ ಎಂಬ ಬಗ್ಗೆ ಗಮನ ಸೆಳೆಯುವ ಸೂಚನೆಗಳನ್ನು ಮಾನ್ಯ ಅಧ್ಯಕ್ಷರವರಿಗೆ ಕಳುಹಿಸಿದ್ದೇವೆಂದು ಅಧ್ಯಕ್ಷರಿಗೆ ಪ್ರಬಲವಾದಂತಹ ಒತ್ತಾಯವನ್ನು ತಂದಿದ್ದಾರೆ. ಇದಕ್ಕೆ ಪ್ರಬಲವಾದ ಕಾರಣವೇನೆಂದರೆ, ಅರಣ್ಯ ಮಂತ್ರಿಗಳನ್ನು ನೇರವಾಗಿ ಪ್ರಶ್ನೆ ಮಾಡಬೇಕಾಗಿದೆ. ಮಲೆನಾಡು ಪ್ರದೇಶಗಳಾದ ಮಡಿಕೇರಿ, ಚಿಕ್ಕಮಗಳೂರು, ಶಿವಮೊಗ್ಗ, ಪಶ್ಚಿಮಘಟ್ಟಗಳಲ್ಲೂ ಕೂಡ ಮಳೆಯಿಲ್ಲದೆ ಅಭಾವ ಪರಿಸ್ಥಿತಿ ಇದೆ. ಇದಕ್ಕೆ ಕಾರಣವೇನು ಎಂದು ಸರ್ಕಾರ ಸ್ವಲ್ಪ ಮಟ್ಟಿಗೆ ಚಿಂತನೆ ಮಾಡಿದಿಯೆ ಎಂದು ನಾನು ಸರ್ಕಾರವನ್ನು ನೇರವಾಗಿ ಕೇಳಬೇಕಾಗಿದೆ. ಮಾನ್ಯ ಅರಣ್ಯ ಮಂತ್ರಿಗಳಾದ ಮಾದೇಗೌಡರು ಇದಕ್ಕೆ ಕಾರಣರಲ್ಲ. ಕರ್ನಾಟಕ ಸರ್ಕಾರ ಇವತ್ತು ಕರ್ನಾಟಕ ರಾಜ್ಯದಲ್ಲಿ ನಿರಂತರವಾಗಿ ಅರಣ್ಯವನ್ನು ನಾಶ ಮಾಡುತ್ತಿದೆ, ಲೂಟಿ ಮಾಡುತ್ತಿದೆ ಎಂದು ನಾನು ಸರ್ಕಾರವನ್ನು ನೇರವಾಗಿ ಆರೋಪಿಸುತ್ತಿದ್ದೇನೆ. ಇದಕ್ಕೆ ಮೊದಲನೆಯ ಕಾರಣ ಸರ್ಕಾರ. ಅರಣ್ಯವನ್ನು ಬೆಳೆಸುತ್ತೇವೆ ಎಂದು ಹೇಳಿಕೊಂಡು ಕಾರ್ಯಕ್ರಮಗಳನ್ನು ಹಾಕಿಕೊಂಡು, ಅರಣ್ಯಗಳನ್ನು ಸಂಪೂರ್ಣವಾಗಿ ನಾಶ ಮಾಡುತ್ತಿರುವುದರಿಂದ ಮಳೆಯ ಅಭಾವಕ್ಕೆ ಮೊದಲನೆಯ ಕಾರಣ ಸರ್ಕಾರವೆಂದು ಹೇಳಲು ಇಚ್ಛೆಪಡುತ್ತೇನೆ.

---

† Indicates that remarks or Speeches have not been rev i the member concerned.

ನಾನು ಇವತ್ತು ಬಹಳ ಮನನೊಂದು ಹೇಳುತ್ತೇನೆ. ಏನೆಂದರೆ ಕೊಡಗು ಜಿಲ್ಲೆಯಲ್ಲಿ ಇವತ್ತಿಗೆ ೪೫ ಇಂಚು ಮಳೆ ಬೀಳಬೇಕಾಗಿತ್ತು. ಕೃಷ್ಣರಾಜಸಾಗರದಲ್ಲಿ ೧೦೭ ಅಡಿಗಳಿಂದ ೧೧೦ ಅಡಿ ನೀರು ಬರಬೇಕಾಗಿತ್ತು. ಕಾವೇರಿ ಹುಟ್ಟತಕ್ಕ ಜಾಗ ಭಾಗಮಂಡಲ ಮತ್ತು ಕಾವೇರಿ ನದಿಯ ಮೂಲ ತಲಕಾವೇರಿಯಲ್ಲಿ ಮೂರು ವಾರಗಳಿಂದ ಮಳೆ ಬಿದ್ದಿಲ್ಲ. ಅಲ್ಲಿ ಮಳೆ ಬೀಳದಿರುವುದಕ್ಕೆ ಈ ಪರಿಸ್ಥಿತಿ ಉಂಟಾಗಬೇಕಾದರೆ ಕಾರಣವೇನು ಎಂದು ಮಾನ್ಯ ಅರಣ್ಯ ಮಂತ್ರಿಗಳು ಹೇಳಲಿ. ಕಳೆದ ಮೂರು ವರ್ಷಗಳಿಂದ ಪದೇ ಪದೇ ಪಶ್ಚಿಮ ಘಟ್ಟದ ಕಡೆ ಇರತಕ್ಕ ಅರಣ್ಯವನ್ನು ಮತ್ತು ಕಾವೇರಿ ಜಲಾನಯನ ಅರಣ್ಯ ಪ್ರದೇಶವನ್ನು ಮತ್ತು ಕರ್ನಾಟಕ ರಾಜ್ಯದಲ್ಲಿರತಕ್ಕ ಭಾರಿ ನೀರಾವರಿ ಯೋಜನೆಯಿಂದ ಮುಳುಗಡೆಯಾಗುವ ಅರಣ್ಯ ಪ್ರದೇಶವನ್ನು ಉಳಿಸಿ ಎಂದು ಪ್ರತಿಸಾರಿಯೂ ಕೇಳುತ್ತಿದ್ದೇವೆ. ನಮ್ಮ ಕೂಗು ಅರಣ್ಯ ರೋಧನವಾಗಿದೆಯೇ ಹೊರತು ಅರಣ್ಯವನ್ನು ಬೆಳಸಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುವಲ್ಲಿ ಏನೂ ಆಗಿಲ್ಲ. ನಿರಂತರವಾಗಿ ಕಾಡುಗಳನ್ನು ಕಡಿಯುತ್ತಿದ್ದಾರೆ. ನಮ್ಮ ಕೊಡಗು ಜಿಲ್ಲೆ ಉತ್ತಮವಾದಂತಹ ನೈಸರ್ಗಿಕ ಸಂಪತ್ತನ್ನು ಹೊಂದಿದಂತಹ ಜಿಲ್ಲೆ. ಆ ಜಿಲ್ಲೆಯನ್ನು ಇವತ್ತು ಮೈದಾನ ಪ್ರದೇಶವನ್ನಾಗಿ ಮಾಡಿದ್ದಾರೆ. ಚೆಂಡಾಟ ಆಡಲಿಕ್ಕೆ ಯೋಗ್ಯವಾದ ಸ್ಥಳವನ್ನಾಗಿ ಮಾಡಿದ್ದಾರೆ. ಕಾವೇರಿ ಜಲಾನಯನ ಪ್ರದೇಶವನ್ನು ಮೈದಾನ ಪ್ರದೇಶವನ್ನಾಗಿ ಮಾಡಿದವರು ಮಾನ್ಯ ಮಾದೇಗೌಡರು ಎಂದು ಹೇಳಿದರೆ ಆಗುವುದಿಲ್ಲ, ಇದಕ್ಕೆ ನೇರವಾದ ಕಾರಣ ಸರ್ಕಾರವೆಂದು ಹೇಳುತ್ತಿದ್ದೇನೆ. ಅರಣ್ಯ ಖಾತೆಗೆ ಮಾನ್ಯ ಮಾದೇಗೌಡರು ಬರಬಹುದು ಹೋಗಬಹುದು ಅಥವಾ ಬೇರೆಯವರು ಬರಬಹುದು. ಅರಣ್ಯವನ್ನು ಸರ್ಕಾರ ನಿರಂತರವಾಗಿ ನಾಶ ಮಾಡುತ್ತಿದೆ ಎಂದು ಬೆಟ್ಟು ಮಾಡಿ ತೋರಿಸುತ್ತೇನೆ. ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಕೂಡ ಅರಣ್ಯವನ್ನು ಸಂರಕ್ಷಣೆ ಮಾಡಿ ಎಂದು ಹೇಳುತ್ತಿವೆ. ಕರ್ನಾಟಕ ರಾಜ್ಯದ ಚಿತ್ರವನ್ನು ನಮ್ಮ ಮುಂದೆ ಇಟ್ಟಾಗ್ಯೆ ನಮ್ಮ ರಾಷ್ಟ್ರದಲ್ಲಿ ಶೇಕಡ ೨೧ರಷ್ಟು ಅರಣ್ಯ ಇದೆ ಎಂದು ಕೊಟ್ಟಿದ್ದಾರೆ, ಇವತ್ತು ಅದು ಎಲ್ಲಿ ಇದೆ ? ಆ ಒಂದು ಅಂಕಿಸಂಖ್ಯೆ ತಮ್ಮಲ್ಲಿ ಇದೆಯೇ ಎಂದು ಕೇಳುತ್ತಿದ್ದೇನೆ. ದಯಮಾಡಿ ನಿಮ್ಮ ಅರಣ್ಯ ಇಲಾಖಾ ಅಧಿಕಾರಿಗಳ ಜೊತೆಯಲ್ಲಿ ಕುಳಿತು ತಾವು ಚರ್ಚೆ ಮಾಡಿ. ನಿಮ್ಮ ಇಲಾಖೆಯಲ್ಲಿ ನಿಷ್ಠಾವಂತ ಅಧಿಕಾರಿಗಳು ಅರಣ್ಯವನ್ನು ಸಂರಕ್ಷಣೆ ಮಾಡಬೇಕೆಂಬ ಕಳಕಳಿ ಇರುವಂತಹ ಅಧಿಕಾರಿಗಳು ಬೇಕಾದಷ್ಟು ಮಂದಿ ಇದ್ದಾರೆ. ಇಂತಹ ಅಧಿಕಾರಿಗಳು ಯಾವ ಅರಣ್ಯವನ್ನೂ ಸಹ ಯಾರಿಗೂ ಕೊಡಬೇಡಿ ಪಶ್ಚಿಮ ಘಟ್ಟದಲ್ಲಿರುವ ಕಾಡನ್ನು ಕಡಿಯಲು ಪ್ಲೈವುಡ್ ಫ್ಯಾಕ್ಟರಿಯವರಿಗೆ ಅವಕಾಶ ಕೊಡಬೇಡಿ ಎಂದು ಕೆಳ ಹಂತದಿಂದ ಮೇಲಿನ ಹಂತದವರೆಗೆ ನೋಟ್ ಹಾಕಿ ಕಳುಹಿಸಿಕೊಟ್ಟರೂ ಸಹ ಸರ್ಕಾರದವರು ಆ ನೋಟ್‌ನ್ನು ತಿರಸ್ಕಾರ ಮಾಡಿದ್ದಾರೆ. ಈ ರೀತಿಯಾಗಿ ಪಶ್ಚಿಮ ಘಟ್ಟದಲ್ಲಿರುವ ಅರಣ್ಯವನ್ನು ಸತತವಾಗಿ ನಾಶ ಮಾಡುವಂತಹ ಒಂದು ಕಾರ್ಯಕ್ರಮವನ್ನು ಇವರು ಹಾಕಿಕೊಳ್ಳುವುದಾದರೆ ಅದರಿಂದ ನಮ್ಮ ರಾಜ್ಯದ ವಾತಾವರಣ ಏರುಪೇರಾಗುವುದಕ್ಕೆ ಈ ಸರ್ಕಾರವೇ ಕಾರಣವಾಗುತ್ತದೆಂದು ಹೇಳುತ್ತೇನೆ. ಈ ಹಿನ್ನೆಲೆಯಲ್ಲಿರುವಂತಹ ಪ್ರಭಾವಯುತವಾದಂಥ ಶಕ್ತಿ ಯಾವುದು ಎಂದು ನಾನು ತಮ್ಮನ್ನು ನೇರವಾಗಿ ಕೇಳುತ್ತೇನೆ ? ಈ ವಿಚಾರದಲ್ಲಿ ನಾನು ನೇರವಾದಂಥ ಆಪಾದನೆ ಮಾಡಿದರೆ ತಾವು ತಪ್ಪು ತಿಳಿಯಬಾರದು. ಈ ರೀತಿ ಕೆಲವರ ಅನುಕೂಲಕ್ಕಾಗಿ ೧೦–೨೦ ಕೋಟಿ ರೂಪಾಯಿಗಳ ಅರಣ್ಯ ನಾಶ ತಾವು ಮಾಡಬಹುದು. ಆದರೆ ಇನ್ನು ೨೦ ವರ್ಷಗಳಲ್ಲಿ ತಾವು ೩ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಇಷ್ಟೊಂದು ಪ್ರಮಾಣದಲ್ಲಿ ಅರಣ್ಯವನ್ನು ತಾವು ಬೆಳೆಸುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ, ಮರದ ವ್ಯಾಪಾರಿಗಳು ಮತ್ತು ಪ್ಲೈವುಡ್ ಫ್ಯಾಕ್ಟರಿಯವರು ನಿಮಗೆ ತಂದುಕೊಡುವ ಮನಿ–ಬ್ಯಾಗ್ ಏನಿದೆ, ಅದಕ್ಕೆ ತಾವು ಕಟ್ಟುಬಿದ್ದು ಅರಣ್ಯ ನಾಶ ಮಾಡಲು ತಾವು ಅವಕಾಶ ಮಾಡಿಕೊಟ್ಟಿದ್ದೀರಿ ಎಂದು ನಾನು ಇಲ್ಲಿ ಗುರುತರವಾದಂಥ ಆಪಾದನೆ ಮಾಡುತ್ತಿದ್ದೇನೆ. ಈ ಆಪಾದನೆಯನ್ನು ಬಹಳ ಜವಾಬ್ದಾರಿಯಿಂದ ಮತ್ತು ದಾಖಲೆಗಳನಿಟ್ಟುಕೊಂಡು ಮಾಡುತ್ತಿದ್ದೇನೆ, ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷದಲ್ಲಿ ಸಾಧಾರಣವಾಗಿ ಎರಡು ಕೋಟಿ ಘನ ಅಡಿಗಳಷ್ಟು ಮರವನ್ನು ತೆಗೆಯುತ್ತಿದ್ದಾರೆ. ನಮ್ಮ ಕೊಡಗು ಜಿಲ್ಲೆ ಒಂದರಲ್ಲಿಯೇ ೨೨ ಲಕ್ಷ ಘನ ಅಡಿಗಳಷ್ಟು ಮರವನ್ನು ಪ್ರತಿವರ್ಷವೂ ತೆಗೆಯುತ್ತಿದ್ದಾರೆ. ಇಷ್ಟೊಂದು ಪ್ರಮಾಣದ ಮರವನ್ನು ಪಶ್ಚಿಮ ಘಟ್ಟದ ಸಾಲಿನಲ್ಲಿ, ಕಾವೇರಿ ನದಿಯ ಜಲಾನಯನ ಪ್ರದೇಶದಲ್ಲಿ ತೆಗೆಯುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರುವ ೧೭ ಪ್ಲೈವುಡ್ ಫ್ಯಾಕ್ಟರಿಯವರು ಸತತವಾಗಿ ಪಶ್ಚಿಮ ಘಟ್ಟದ ಅರಣ್ಯವನ್ನು ನಾಶ ಮಾಡುತ್ತಿದ್ದಾರೆ ಮತ್ತು ಲೂಟಿ ಮಾಡುತ್ತಿದ್ದಾರೆ. ಈ ಕಾರಣದಿಂದ ಕಾವೇರಿ ಜಲಾನಯನ

ಪ್ರದೇಶದಲ್ಲಿ ೩೩ ಸಾವಿರ ಎಕರೆಗಳವರೆಗೆ ಇದ್ದಂಥ ಕಾಡಿನ ಪೈಕಿ ಇನ್ನು ಕೇವಲ ೯–೧೦ ಎಕರೆಗಳವರೆಗೆ ಮಾತ್ರ ಉಳಿದಿದೆ. ಇದನ್ನಾದರೂ ಕೂಡ ಕಾಡನ್ನು ಸಂರಕ್ಷಣೆ ಮಾಡುವಂತಹ ಒಂದು ಕಳಕಳಿ ಈ ಸರ್ಕಾರಕ್ಕೆ ಇಲ್ಲ. ಈ ಉಳಿದಿರುವ ಕಾಡನ್ನು ಸಂರಕ್ಷಣೆ ಮಾಡಬೇಕೆಂದು ಕಳೆದ ೩ ವರ್ಷಗಳಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ಯ ಅರಣ್ಯ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಪತ್ರಗಳನ್ನು ಬರೆದಿದ್ದೇನೆ. ಆದರೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಬೇಕಾಗಿದೆ, ಇದರ ಕಡೆ ನಮಗೆ ಹೆಚ್ಚಿನ ಒಂದು ಕಳಕಳಿ ಇದೆ ಮತ್ತು ಆಸಕ್ತಿ ಇದೆ ಎಂದು ಒಂದು ಕಡೆ ಹೇಳುತ್ತಾರೆ. ಆದರೆ ಮತ್ತೊಂದು ಕಡೆಯಲ್ಲಿ ಅರಣ್ಯದ ಲೂಟಿ ನಡೆಯುತ್ತಿದೆ. ಈಗಿರುವಂತಹ ಅರಣ್ಯದ ಅಸಮತೋಲನವನ್ನು ಸರಿಪಡಿಸದಿದ್ದರೆ ಮುಂದೆ ಮಾನವ ವಂಶವೇ ಅಳಿಸಿ ಹೋಗಬಹುದೆಂಬ ಎಚ್ಚರಿಕೆಯನ್ನು ಕೊಟ್ಟರೂ ಸಹ ಅರಣ್ಯದ ನಾಶ ನಡೆಯುತ್ತಲೇ ಇದೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಇವೊತ್ತು ಕೊಡಗಿನಲ್ಲಿ ಯಾವ ಒಬ್ಬ ಅರಣ್ಯಾಧಿಕಾರಿಯೂ ದಕ್ಷತೆಯಿಂದ ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಯಾವ ಪೋಲೀಸ್ ಅಧಿಕಾರಿಯೂ ದಕ್ಷತೆಯಿಂದ ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಇದಕ್ಕೆ ಕಾರಣವೇನು ? ಕೊಡಗಿನಲ್ಲಿರುವಂತಹ ಒಬ್ಬ ವ್ಯಕ್ತಿ ಅಂದರೆ ಕಾಂಗ್ರೆಸ್ (ಐ) ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿರುವಂತಹ ಒಬ್ಬ ವ್ಯಕ್ತಿ ಅಲ್ಲಿ ಮರದ ವ್ಯಾಪಾರಿ ಆಗಿದ್ದಾರೆ. ಇವರು ಕೊಡಗು ಜಿಲ್ಲೆಯಲ್ಲಿರುವ ಕಾಡನ್ನೆಲ್ಲಾ ನಾಶ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಶಾಮೀಲಾಗಿದೆ. ಇವರು ಇಲ್ಲಿಯವರೆಗೆ ಎಷ್ಟು ಘನ ಅಡಿ ಮರವನ್ನು ಅಲ್ಲಿ ಕಡಿಯಲು ಅನುಮತಿ ಕೊಟ್ಟಿದ್ದಾರೆಂಬುದು ಏನಾದರೂ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಮಾದೇಗೌಡ.—ಎಷ್ಟೆಷ್ಟು ಕೊಟ್ಟಿದ್ದಾರೆಂಬುದು ತಾವು ಹೇಳಿ.

ಶ್ರೀ ಎಸ್. ಎಂ. ಶೀನರ್ಾಳಿ ಚಂದ್ರಶೇಖರ್.—ಸ್ವಾಮಿ, ನನ್ನದೊಂದು ಕ್ರಿಯಾಲೋಪವಿದೆ, ಏನೆಂದರೆ, ಯಾರ ಮೇಲಾದರೂ ಚಾರ್ಜಸ್ ಫ್ರೇಮ್ ಮಾಡುವುದಿದ್ದರೆ ಮೊದಲೇ ನೋಟೀಸ್ ಕೊಡ ಬೇಕೆಂದು ರೂಲಿಂಗ್ ಇದೆ. ಆದರೆ ಇವರು ತಮ್ಮ ರೂಲಿಂಗ್‌ಗೆ ಮಾನ್ಯತೆ ಕೊಡುತ್ತಿಲ್ಲ. ಈ ಮೊದಲು ಕೆ.ಪಿ.ಸಿ.ಸಿ. (ಐ)ನವರು ಹಣ ಸಂಗ್ರಹ ಮಾಡುತ್ತಿದ್ದಾರೆಂದು ಹೇಳಿದರು. ಈಗ ಕಾಂಗ್ರೆಸ್ (ಐ) ಪಕ್ಷದ ಪ್ರಧಾನ ಕಾರ್ಯದರ್ಶಿಯೊಬ್ಬರ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಈ ತರಹದಿಂದ ಇವರು ಇಲ್ಲಿ ಆಪಾದನೆ ಮಾಡುವುದಾದರೆ ನಾಳೆ ದಿವಸ ನಾವೂ ಸಹ ಇಲ್ಲಿ ಇದೇ ರೀತಿ ಮಾಡಬಹುದು. He has to substantiate his allegations, otherwise, it has to be expunged. I am sorry, he should not make any allegations without any basis. I request the Hon'ble Speaker to expunge the same.

SRI M. C. NANAIAH.—What unparliamentary I have said ? I want to know whether he is a party to the destruction of the forest wealth. You are also coming from the Maland area. Please bear with me ; Shimoga is also not having rains now-a-days even though it comes under Maland area. You please bear with me.

ಶ್ರೀ ಎಸ್. ಎಂ. ಶೀನರ್ಾಳಿ ಚಂದ್ರಶೇಖರ್.—ಈ ಬಗ್ಗೆ ತಾವು ರಾಜಕೀಯವಾಗಿ ಮಾತನಾಡ ಬೇಡಿ.

SRI U. T. FAREED.—Why do you politicalise the issue. You substantiate your argument with relevent records.

(INTERUPTIONS)

ಶ್ರೀ ಎಸ್. ಎಂ. ಶೀನರ್ಾಳಿ ಚಂದ್ರಶೇಖರ್.—ಮಾನ್ಯ ಸ್ನೇಹಿತರು ಮರದ ವ್ಯಾಪಾರ ಮಾಡುವವರಿಂದ ಹಣ ಸಂಗ್ರಹ ಮಾಡಿ ಲೈಸೆನ್ಸ್ ಕೊಡುತ್ತಿದ್ದಾರೆಂದು ಹೇಳಿದರು ಮತ್ತು ಕೆ.ಪಿ.ಸಿ.ಸಿ. (ಐ) ಪ್ರಧಾನ ಕಾರ್ಯದರ್ಶಿ ಒಬ್ಬರು ಇದರಲ್ಲಿ ನೇರವಾಗಿ ಭಾಗಿಯಾಗಿದ್ದಾರೆಂದು ಹೇಳಿದರು. ಇದೇನು ಸಾಮಾನ್ಯ ಸಂಗತಿಗಳಲ್ಲ.

Sri M. C. Nanaiah.—I am making these allegations with full responsibility, I own those allegations and I prove those allegations

ಶ್ರೀ ಎಸ್. ಎಂ. ಶೀನರ್ನಾಳಿ ಚಂದ್ರಶೇಖರ್.—ಇಂತಹ ವಿಚಾರಗಳನ್ನು ನೋಟೀಸ್ ಕೊಟ್ಟು ಪ್ರಸ್ತಾಪ ಮಾಡಬೇಕೆಂದು ತಮ್ಮ ರೂಲಿಂಗ್ ಇದ್ದರೂ ಸಹ ಇವರು ಅದನ್ನು ಡಿಸ್-ಒಬೆ ಮಾಡುತ್ತಿದ್ದಾರೆ.

Sri M. C. Nanaiah.—Let him not disturb me

Sri Sheernali M. Chandrashekhar.—Sir, there is a ruling in this House that one cannot make allegations without substantiating the argument.

Sri M. C. Nanaiah.—He should understand my feelings. I said, persons who are timber merchants, they have by virtue of certain positions are threatening the officers in the district and immobilising them from taking any action. I will substantiate it. Not that I do not have any basis. Immediately after the Debate I will handover all the records to Sri S. M. Sheernalli Chandreshekar ; let him go through and come and compliment me. I have been fighting to restore the forest wealth for the last four year eversince I became the Member of Legislative Assembly. After I became the Forest Minister fortunately I remained there only for 48 days, it was my goodluck. If I had continued to be a Minister till today, propably I might have had to face severe opposition as the Hon, Forest Minister is facing today. While I was the Minister, I had called for a meeting of all the officers of the Forest Department and after discussing withthem therabare. I passed on the minutes of the meeting to the than Chief Minister. In that I had made very clear that ecological imbalance has set up in our State and destruction of forest has been going on recentlessly and fullstop has to be put to this. The destruction of forest should be put an end to, more particularly, on account of erratic mansoon experienced by our State especially in rain bearing zone. I made a suggestion that western ghat belt including catchment areas of major rivers more particularly cauvery, including jammamalai which is classified as a purt of the reserve forest which are are lying adjacent to the western ghat reserve forest, should be treated s bio-reserve and no single tree shall be permitted to fell at least for another ten years. I had written to the Chief Minister and I had a lengthy discusssion with Sri Devaraj Urs. Than the Chief Minister asked me that several arers have been leased out to 17 plywood industries for a long period and what would happen to those industries. Than, I to'd him, you have been giving them wood for the last fifteen yeaas at the rate of Rs. 2 per cubic feet and now only a few trees are left out. I further said, the

State will not gain anything by continuing these contracts, On the other hand, ecological imbalance will further deteriarate and a major crisis will have to be faced by the State of Karnataka. Then, he said I agree with the Forest Minister and on 5th January 1980 he passed an order. Unfortunately our Government did not survive and I also did not survive to implement that notification. Thereafter that notification never say the light of the day. Immediately after 1½ months, 4 permissions were accorded felling trees in the areas which I wanted to preserve as bio-reserve forest. To whom have they given ? They have given it to an individual.

11-00 A.M.

Sir, 1200 acres of potential ever-green forest land has been leased out to one single individual on one single day i.e., on 11-2-1980 vide order Nos. (i) FFD 35 and FFD 80 (450 acres—Jamma Malai Land), (ii) FFD 5 (260 acres—adjacent to reserve forest, Western Ghat belt) and (iii) FFD 4 (300 acres—potential ever-green forest land). Who is the great man Sir ? This great man today threatens our officers in the Department that if they enquire into any matter, into his transactions, he would find out places for their transfers where there is no water. Sir, one Divisional Forest Officer, a very very honest officer was working in my district. Let me not name him. I am very certain that the Hon. Minister for Finance Sri M. Veerappa Moily must be knowing him. After coming to know serious irregularities illegal stepping of timber transported under forged and bogus permits, seized all the 8 saw mills in Coorg district. He took up the investigation and one of the saw mills seized in Mercara town itself belonged to this great man. After the investigation, officers have found out illicit for transport of timber under bogus and forged permits, valued at lakhs and lakhs of rupees. When he started the investigation and was about to take action, within 24 hours, telephonically that officer has been transferred from Mercara to some-where in Bangalore. Sir, I would like to know the object of the Government with regard to the prevention of smuggling of forest when lakhs and lakhs of rupees timber is being smmugled under forged and bogus permits and if the honest officers were to go and investigate into the matter, they are prevented, then what is the use of having officers there. After the Divisional Forest Officer's transfer, all the files were handed over to the Assistant Conservator of Forest attached to the mobile squad. This Assistant Conservator of Forest has got with him 36 bogus and fictitious passes. This great man for whom there is no land in my district, for everything he says he would ring up to Third Floor of the Secretariat. I do not know whether you have read it or not "ಸಂಯುಕ್ತ ಕರ್ನಾಟಕ" ದಿನಪತ್ರಿಕೆಯು ವರಂಖ

ಪುಟದಲ್ಲಿ ಅರಣ್ಯಾಧಿಕಾರಿಗಳಿಗೆ ಕಿರುಕುಳ ಎಂದು ಬಂದಿದೆ. Sir, that officer is living under constant threat merely because he asked that great man to produce accounts, entry registers etc. etc. This is a serious matter. The officer is being prevented from investigating into the matter. Telephone calls have gone to him threatening his life. The window panes of his house were broken. When his wife was alone in the house, these people have gone and threatened her. People stand behind the bushes and pelting stones. In spite of all these things coming to the notice of the Government. they are unable to give protection to that honest officer. Will the Government instruct the Police authorities to give protection to this officer atleast now ? If the Government is not in a position to tackle these anti-social elements who are threatening the lives of these honest officers then for what purpose we should have the Government ? Let me make an honest suggestion to wind up the Forest Department itself in Coorg district.

Sir, hardly 10 years back, in the year 1972. this great man filed an application in the Court of the Civil Judge for insolvency. A man who was unable to pay Rs. 3000 and had no means of livelihood, within a period of 10 years ammassed lot of wealth. He is worth two crores of rupees today. How did he make this money ? What is the source of making money. Within a period of 1½ years, he calls himself a great timber merchant in Coorg district. Within a period of 3 years, he has purchased 120 acres of assured irrigated land valued at Rs. 80 lakhs, owning a house worth Rs 15 lakhs and also a Mercedes Benz and Ambassador car. I have obtained a copy of insolvency certificate which I am passing on to the Hon. Minister for Forest. How these things could happen Sir, within a period of 3 years ? What is the source of amassing two crores of wealth ? The source is 'the Forest'. He is destroying the forest. He is carrying timber to saw mills threatening the officers of Forest Department under bogus and fictitious passes. Well Sir, I would not be wrong in questioning the very existence of the Government itself. It will be better to summon that great man and make him the Chief Inspector General of Forest of Karnataka. I would rather welcome such a proposal. I would like to know honestly from the Hon. Minister for Forest is he in a position to stop the atrocities, vandalism being committed on the forest by these anti-social elements ? If the Government is not in a position to do this, let the people of Karnataka know why the Government is not in a position to do that. On an average the Government is allotting these people to extract 55 lakhs cubic feet of timber every year to plywood industries from different parts of Karnataka of which 20

lakhs cubic feet of timber is from Mysore district alone. Sir, when an application was made sometime back for setting up of a plywood factory in Coorg district on the ground that Coorg is an industrially backward area, the officers of the Government honestly processed the whole thing and they looked into the whole issue.

And they came to the conclusion that there is no area left in Coorg district for the purpose of allotting to plywood industries or for the purpose of setting up any new plywood industry. An applications of one Sri M. D. Issac for setting up a plywood industry in Coorg district was rejected by the Government *vide* file No. FFD 14 FDB 18 dated 13/5/1980. This application of Plywood Industries, Ponnampet, Coorg, was rejected by the Government *vide* the above referred file on the ground that there are no more areas to be ear-marked, the saturation point has already been reached and that we must only regenerate the forest and we should not give any other area in the Coorg district. Sir, I felt so happy that this application was rejected because the officers have opened their rights and the Government have opened their rights and they have come to realise that destroying of forest any more would not be in the interest of the State, would not be in the interest of the ecology of the State. Sir, this application was rejected on 13/5/1980 and paradoxically within one year i e., on 13/5/1981, the Government have accorded permission for this very individual, the great man, who should be named as the 'Director General of Forest. He has been granted permission not only to set up a factory in Kushalanagar but also to fell trees over an area of 3,000 acres for a lease period of 30 years. This is un-heard of in the history of the forest department in Karnataka. Within a period of one year, what circumstances have changed to give3 000cubic metres of timber every year for a period of 30 years? Sir, only a year back the Government had said that no more tree is available for allotment. But within a period of one year, whether they have re-generated new forest to the extent of 3,000 acres, whether a new forest wealth has been created within a period of one year as if it is Allauddin's Magic Lamp? How did they give this? Who is this individual who has taken this patronage from the Government? Let me go through the order. Many of the hon'ble Members may not be knowing and the officers know about this. Let me compliment the officers as they have got the desire to protect forest. Because 'Conservator of Forests' means to conservate and not to destroy the forests. But unfortunately I do not know who did this, but I am very certain that the Minister for Forest had knowledge of this. I came and pleaded with him. 'Sir, for heaven's sake do not give anything hereafter. Kindly protect the belt. If

at all anybody is interested in trying to make a man rich, let him be imported from my place to Bangalore and give him a place somewhere. Does not matter even if he earns a 100 crores here. But let him not make money at the cost of forest'.

Sir, this is the letter from the Chief Conservator of Forests in response to the representation of the Coorg Plywood Industry. Madikeri.

> "Messrs. Coorg Plywood Industry, Madikeri in their reprentation No. 1, above have requested for allotment of 5,000 Metric Metres of plywood timber for 30 years in the following areas of Madikeri Division. Pathagal Block-661 acres."

Sir this is the catchment area for the river Cauvery. This is the reserved forest area. Then 1,993 acres in B.T.Block. This is again the catchment area for the river cauvery, the evergreen forest, inaccessible area, The working plant people could not even go there to survey. Then Nedumalai Block-518 acres. This is also the Western Ghat belt and the catchment area for the river Cauvery. Birnali Pattachimalai-Kerala border in the southern most part of the Coorg district-465 acres. This is also the Western ghat belt. Terali Pattachimalai-400 acres. Sir, after examining the request of the company and after all the officers have rejected this request the Government or the cabinet or the Minister, I do not know as to who took the decision to accord permission and ultimately granted permission.

> "After examining the request of the company, the Government are pleased to sanction for the allotment of 3.000 Metric Metres of Plywood timber per annum subject to availability for a period of 30 years from the date of the Government order in favour of Messers. Coorg from the areas at the rates mentioned below"

Sir, this is the thing which I cannot understand. Sir, a man who comes forward for plywood for his factory, should have his own factory. But here is the case where he comes forward with an application for supply of plywood timber to his industry without his factory In the letter head it is mentioned as the 'Coorg Plywood Industries'. At the time of making his application, he should have his own industry. But look at this Government order. 'This Company shall be permitted for extraction of timber after the factory is fully established to the state of production within three years. "This means that the factory was not existing. Though the factory is not there, the applicant has been given time for a period of three years

to set up a factory and thereafter he should extract the timber. At least did the Government verify at the time he made his application as to whether this man has got factory anywhere in Coorg district? There is no Plywood Industry in Coorg district. He has got one Saw Mill in Mercara town. That too, it is seized now and it is not functioning. An enquiry is going on and the officers are not allowed to enquire into the matter. Sir, this lease is for a period of 30 years. In the first place, granting of an area of 3,000 acres in the Western Ghat belt itself is the wrong policy of the Government. It should not have been done. Why this special patronage to one single individual? I would like to know from the Government. The Government have given 3,000 acres for a period of 30 years to extract 3,000 Metres. One Metre is equal to 35 Cubic Feet. That means he has been permitted to extract 1,05 000 Cubic Feet of timber for every year and for the period of 30 years it becomes 31,50,000 Cubic Feet. Sir, they have granted this timber as if they have built this forest to give as gratis. If the Minister had developed this forest, I would not have come in his way. But the nature has preserved this forest for hundreds and thousands of years. When the applicant has no factory of his own, without looking into the areas as to where they are giving permission, the Government have given permission. Why this special patronage to one single individual? I would like to know from the Government for what reason? Should I not say that this man is above the Minister, above all the officers and no laws will apply to him? I will come to another transaction involving Rs. 2 croers within one and a half years. I must honestly admit that when I pleaded with Sri G. Madegowda, the Minister for forest for the protection of forests, he said "I am not doing this job, myself." He also said that if somebody does it and if the matter were to go before the Cabinet and if the cabinet were to take the decision, it is out of his control. Sir, let anybody take the decision, I have no objection. But do you have the concern for the protection of forest to maintain the ecological balance, a balance which has been terribly upset.

SRI A. LAKSHMISAGAR.—What is the consideration of this deal, going out of way, giving the person the permission to......

SRI M. C. NANAIAH.—I do not know. But .....

ಶ್ರೀ ಜಿ ಮಾದೇಗೌಡ. —ಮಾನ್ಯ ಸದಸ್ಯರಾದ ಶ್ರೀ ನಾಣಯ್ಯನವರು ಈ ಸದನದಲ್ಲಿ ಏನೊಂದು ಪ್ರಸ್ತಾಪವನ್ನು ಮಾಡಿದ್ದಾರೆ, ಅದಕ್ಕೆ ನಾನು ಈ ಮೇಲೆ ಉತ್ತರ ಹೇಳುತ್ತೇನೆ. ಇವರ ಮಧ್ಯದಲ್ಲಿ ಯಾವುದೋ ಒಂದು ವ್ಯಕ್ತಿಗೆ ಸಂಬಂಧಪಟ್ಟ ಹಾಗೆ ಸದನದಲ್ಲಿ ಪ್ರಸ್ತಾಪ ಮಾಡುವಾಗ, ಇದಕ್ಕೆ ಮುಂಚೆ ಆ ಫ್ಯಾಕ್ಟರಿಗಳಿಗೆ ಹಿಂದಿನ ಸರ್ಕಾರದವರು ಏನು ಪರ್ಮಿಷನ್ ಕೊಟ್ಟಿದ್ದಾರೋ ಅದನ್ನು ಹೇಳಬೇಕಲ್ಲ.

It is a continuous process. What made the previous Governments to grant to some other industries.

SRI M. C. NANAIAH.—I will come to that.

SRI H. D. DEVE DOWDA.—I would like to know in how many cases the Government, this Government or previous Governments, have accorded permission over-riding the opinion of the Chief Conservator of Forest? ಇದು ಮುಖ್ಯವಾದಂತಹ ಪ್ರಶ್ನೆ ಹಿ ದಿನ ಸರ್ಕಾರದವರು ಕೊಟ್ಟಿದ್ದಾರೆ. ಅದರ ಹಿನ್ನಲೆಯಲ್ಲಿ ನಾವು ಕೊಟ್ಟಿದ್ದೇವೆ ಎಂದು ಹೇಳುವ ಔಚಿತ್ಯವಾದರೂ ಏನು ?

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಶ್ರೀಮಾನ್ ನಾನಯ್ಯನವರು, ಕೆಳಗಿನ ಅಧಿಕಾರಿಗಳೆಲ್ಲಾ ಈ ವಿಷಯದ ಬಗ್ಗೆ ಫೈಲ್ ಪುಟ್ ಅಪ್ ಮಾಡಿ ತಮ್ಮ ಹತ್ತಿರ ಕಳುಹಿಸಿಕೊಡುತ್ತಿದ್ದಾರೆ, ತಾವು ಇದನ್ನು ಪರಿಶೀಲನೆ ಮಾಡಿ ಎಂದು ನನಗೆ ಹೇಳಿದರು.

ಶ್ರೀ ಜಿ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಹತ್ತಿರ ಫೈಲ್ ಬಂದಾಗ ನಾನು ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರೂ ಕೂಡ ಆ ನಂತರ ಅವರಿಗೆ ಲೈಸೆನ್ಸ್ ಕೊಡುವುದಕ್ಕೆ ಯಾರು ಕಾರಣರು ಎಂಬುದನ್ನು ತಿಳಿಸುತ್ತೀರಾ ? ಮತ್ತು ಕೆಲವರಿಗೆ ಲೈಸೆನ್ಸ್ ಸಿಕ್ಕಿದೆ ಮತ್ತೆ ಕೆಲವರಿಗೆ ಲೈಸೆನ್ಸ್ ಸಿಕ್ಕಿಲ್ಲ ಇದಕ್ಕೆ ಕಾರಣರು ಯಾರು ?

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಶ್ರೀಮಾನ್ ನಾನಯ್ಯನವರು ಪಶ್ಚಿಮಘಟ್ಟಗಳನ್ನು ಉಳಿಸಬೇಕು ಎನ್ನುವ ದೃಷ್ಟಿಯಲ್ಲಿ ಆ ಮಾತನ್ನು ಹೇಳಿದ್ದಾರೆ. ಆದರೆ ನಾನು ಹೇಳುವುದೇನೆಂದರೆ, ಪಶ್ಚಿಮಘಟ್ಟಗಳನ್ನು ನಾಶಮಾಡಬೇಕು ಎಂದು ಯಾರಿಗೂ ಉದ್ದೇಶವಿಲ್ಲ. ಆದರೆ ಆ ಫೈಲ್ ಎಲ್ಲಾ ಅಧಿಕಾರಿಗಳು ರೆಕಮೆಂಡ್ ಮಾಡಿ ಕಳುಹಿಸಿದ ಮೇಲೆ ನಾವು ಕೊಟ್ಟಿದ್ದೇವೆ ನಾವೇ ಈ ರೀತಿ ಹೊಸದಾಗಿ ಕೊಟ್ಟಿಲ್ಲಾ ಹಿಂದಿನ ಸರ್ಕಾರದವರೂ ಸಹ ಈ ರೀತಿ ಕೊಟ್ಟಿದ್ದಾರೆ. ಇದಕ್ಕೆ ಯಾರು ಕಾರಣರು ಎನ್ನುವ ಪ್ರಶ್ನೆಯನ್ನು ಯಾರೂ ಕೇಳುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವುದೇ ಒಂದು ಸರ್ಕಾರವೂ ಸಹ ಒಂದು ಅಗ್ರಿಮೆಂಟ್ ಮಾಡಿಕೊಂಡು ಮರಗಳನ್ನು ಕಡಿದು ಹಾಕಿಸಬೇಕು ಎನ್ನುವ ಅಭಿಪ್ರಾಯವಿಲ್ಲ. ಆದರೆ ಯಾವುದೇ ಒಂದು ರೀತಿಯ ಅಗ್ರಿಮೆಂಟ್ ಮಾಡಿಕೊಳ್ಳುವಾಗ ಅದರ ಸಾರಾಸಾರವನ್ನು ವಿಚಾರಮಾಡಿ ಸರ್ಕಾರಕ್ಕೆ ಅದರಿಂದ ಲಾಭ ಬರುವಂತ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗಿತ್ತು. ಆದರೆ consideration should be the interest of the State ಇದನ್ನು ಸರ್ಕಾರ ಮಾಡಿಲ್ಲ. ಇದನ್ನು ಸರಿ ಎಂದು ಹೇಳಬೇಕೋ ಅಥವಾ ತಪ್ಪು ಎಂದು ಹೇಳಬೇಕೋ ಎಂಬುದು ಮಾನ್ಯ ಮಂತ್ರಿಗಳಾದಂತಹ ಶ್ರೀಮಾನ್ ಮಾದೇಗೌಡರಿಗೆ ಗೊತ್ತಿಲ್ಲ. ಏಕೆಂದರೆ, ಈ ವಿಷಯ ಮಾನ್ಯ ಮಂತ್ರಿಗಳಿಗೆ ಏನೇನೂ ಗೊತ್ತಾಗುವುದಿಲ್ಲ. ಎಲ್ಲಾ ವಿಷಯಗಳು ಮಾನ್ಯ ಮುಖ್ಯಮಂತ್ರಿಗಳಿಂದಲೇ ನೇರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹೋಗಿ ತಲುಪುತ್ತವೆ. ಆದ್ದರಿಂದ ಅವರು ಏನು ಮಾಡುವುದಕ್ಕೆ ಸಾಧ್ಯ ? ಇದು ಮಾನ್ಯ ಮುಖ್ಯ ಮಂತ್ರಿಗಳಿಂದ ಆರ್ಡರ್ ಆಗಿ ಹೋಗಿದೆ .. ..

SRI G. MADE GOWDA.—I am sorry for this remark.

ಶ್ರೀ ಎಸ್. ಆರ್. ಬೊಮ್ಮಾಯಿ.—ಅನೇಕ ವಿಚಾರಗಳು ಸಂಬಂಧಪಟ್ಟ ಮಂತ್ರಿಗಳಿಗೆ ಗೊತ್ತಿರುವುದಿಲ್ಲ, ಅವು ನೇರವಾಗಿ ಹೋಗಿ ತಲುಪುತ್ತವೆ. ಇದರಿಂದ ಮಾನ್ಯ ಮಂತ್ರಿಗಳು ಏನು ಮಾಡಬೇಕು ?

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳ ಕಳಕಳಿ ಏನು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಬಯಲು ಸೀಮೆಯಿಂದ ಬಂದಂತಹವರು. ಆದರೆ ನಾನು ಕಾಡುಸೀಮೆಯಿಂದ ಬಂದಂತಹವನು. ಆದರೆ ನನಗೆ ಒಂದು ಸಂಕಟವಾದರೂ ಏನೆಂದರೆ ಈ ಬಯಲು ಸೀಮೆಯ ಮನುಷ್ಯನಿಗೆ ಈ ಕಾಡು ಸೀಮೆಯ ಮನುಷ್ಯ ಈ ರೀತಿ ಹೇಳಬೇಕಾಯಿತಲ್ಲ ಎಂದು ನನಗೆ ಬಹಳ ಬೇಸರವಾಗುತ್ತಿದೆ. ಇದರಿಂದ ನನಗೆ ಎಷ್ಟು ಹಾನಿಯಾ

ಗುತ್ತದೆಯೊ ಅಷ್ಟೋ ಹಾನಿ ಮಾನ್ಯ ಮಂತ್ರಿಗಳ ಪ್ರದೇಶವಾದ ಮಂಡ್ಯ ಮತ್ತು ಮೈಸೂರು ನಗರಗಳಿಗೆ ಆಗುತ್ತದೆ. ಈ ವಿಷಯವನ್ನು ನಾನು ಮೂರು ವರ್ಷಗಳಿಂದಲೂ ಸಹ ಸತತವಾಗಿ ಹೇಳಿಕೊಂಡು ಬರುತ್ತಿದ್ದೇನೆ. ಆದರೆ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿಲ್ಲ. ಆದರೆ ಸರ್ಕಾರದವರು ಹರಿಹರ ಪಾಲಿಫೈಬರ್ಸ್‌ರವರಿಗೆ ೧೯೬೯ ರಲ್ಲಿ ಒಂದು ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ. ಆ ಅಗ್ರಿಮೆಂಟ್‌ನಲ್ಲಿ ಸುಮಾರು ೩೦ ವರ್ಷದವರೆವಿಗೆ ಅವರಿಗೆ ಮರಗಳನ್ನು ಸಪ್ಲೈ ಮಾಡುವುದಾಗಿ ಬರೆದು ಕೊಟ್ಟಿದ್ದಾರೆ. ಮತ್ತು ಈ ಅಗ್ರಿಮೆಂಟಿನ ಪ್ರಕಾರ ಸರ್ಕಾರದವರು ಬೆಲೆ ಜಾಸ್ತಿ ಮಾಡಬೇಕಾದರೆ ಈ ಹರಿಹರ ಪಾಲಿಫೈಬರ್ಸ್‌ರವರನ್ನು ಕೇಳದೆ ಜಾಸ್ತಿ ಮಾಡುವ ಹಾಗೆ ಇಲ್ಲ,

ಇದರಿಂದ ನನಗೆ ಏನು ಗೊತ್ತಾಗುತ್ತದೆ ಎಂದರೆ, ಈ ಅರಣ್ಯ ಇಲಾಖೆಯವರನ್ನು ಹರಿಹರ ಪಾಲಿಫೈಬರ್ಸ್‌ರವರು ನಡೆಸುತ್ತಿದ್ದಾರೆಯೇ ಅಥವಾ ನಮ್ಮ ಸರ್ಕಾರದವರು ನಡೆಸುತ್ತಿದ್ದಾರೋ ಎಂದು ಅನುಮಾನ ಬಂದಿದೆ. ನಾನು ಆ ಅಗ್ರಿಮೆಂಟ್ ಓದಿದ್ದೇನೆ. ಮತ್ತು ಆ ಅಗ್ರಿಮೆಂಟ್‌ನಲ್ಲಿ ಇರುವಂತಹ ಎಲ್ಲಾ ಕಂಡೀಷನ್‌ಗಳನ್ನು ನಾನು ಕ್ಯಾನ್ಸಲ್ ಮಾಡಬೇಕೆಂದು ಮನಸ್ಸು ಮಾಡಿದ್ದೆ. ಆದರೆ ಅಷ್ಟರಲ್ಲಿ ಅಧಿಕಾರ ನನ್ನ ಕೈಯಲ್ಲಿ ಇರಲಿಲ್ಲ. ಒಂದು ವೇಳೆ ಅಧಿಕಾರ ನನ್ನ ಕೈಯಲ್ಲಿ ಇದ್ದಿದ್ದರೆ ನಾನು ಖಂಡಿತವಾಗಿ ಹರಿಹರ ಪಾಲಿಫೈಬರ್ಸ್‌ರವರೆಗೆ ಮಾಡಿಕೊಟ್ಟಿದ್ದ ಅಗ್ರಿಮೆಂಟ್ ಕ್ಯಾನ್ಸಲ್ ಮಾಡಿ ಪಶ್ಚಿಮ ಘಟ್ಟಗಳನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೆ. Evergreen forest in Karnataka is more than 5 per cent. ಮತ್ತೆ ಈ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆ, ಎಂದರೆ The total forest area of the State is 38,384-06 Square Kms. as against the State geographical area of 1,91,791 Sq. Kms. The percentage of forest area to geographical area is 20 as against the all India average of about 23%. It is stated that this 38,384,06 Sq. Kms. includes C and D class of lands also. ಮತ್ತೆ ಬೆಂಗಳೂರು ನಗರದಲ್ಲಿ ಸುಮಾರು ೧೧೬೮ ಸ್ಕ್ವಯರ್ ಫೀಟ್ ಕಾಡು ಪ್ರದೇಶ ಎಲ್ಲಿ ಇದೆ ? ಮತ್ತು ತಾವು ಬರೀ ರೆಕಾರ್ಡ್ಸ್‌ನಲ್ಲಿ ಮಾತ್ರ ಇಷ್ಟು ಅರಣ್ಯ ಪ್ರದೇಶವಿದೆ ಎಂದು ತೋರಿಸಿದ್ದೀರಿ ಆದರೆ ಅಲ್ಲಿ ಅರಣ್ಯ ಮಾತ್ರ ಇರುವುದಿಲ್ಲ. ನೀವು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಲೆಕ್ಕ ತೆಗೆದುಕೊಂಡರೆ ಅಲ್ಲಿ ನಮಗೆ ಸಿಗುವಂಥಾದ್ದು ಸೊನ್ನೆ ಪರ್ಸೆಂಟ್. ಮತ್ತೆ ಬಳ್ಳಾರಿಯಲ್ಲಿ ೧೭೪೩ ಸ್ಕ್ವಯರ್ ಫೀಟ್ ಕಾಡುಪ್ರದೇಶವಿದೆ ಎಂದು ತೋರಿಸಿದ್ದೀರಿ. ಮತ್ತೆ ಇದೆಲ್ಲಕ್ಕಿಂತ ನಮ್ಮ ಕೋಲಾರ ಜಿಲ್ಲೆಯಲ್ಲಿ ೧೧೪೫ ಸ್ಕ್ವಯರ್ ಫೀಟ್ ಕಾಡುಪ್ರದೇಶವಿದೆ ಎಂದು ತೋರಿಸಿದ್ದೀರಿ. ನಾನು ಕೋಲಾರ ಜಿಲ್ಲೆಯಲ್ಲಿ ಸುಮಾರು ೧೫ ಕಿಲೋಮೀಟರ್ ದೂರದವರೆಗೆ ನೋಡಿದರೂ ಎಲ್ಲಿಯೂ ಒಂದು ನೀಲಗಿರಿ ಮರ ಕಂಡು ಬರಲಿಲ್ಲ, ಆದರೆ ರೇಕಾರ್ಡ್ಸ್‌ನಲ್ಲಿ ಮಾತ್ರ ಈ ರೀತಿ ಕೊಟ್ಟಿದ್ದಾರೆ.

ಒಬ್ಬ ಸದಸ್ಯರು.—ತಾವು ೫೮ ದಿವಸಗಳ ಕಾಲ ಮಂತ್ರಿಗಳಾಗಿದ್ದೀರಿ. ಆಗ ಏನೇನು ಕೆಲಸ ಕಾರ್ಯಗಳನ್ನು ಕೈಗೊಂಡಿದ್ದೀರಿ ?

ಶ್ರೀ ಎಂ. ಸಿ ನಾಣಯ್ಯ.—ಮಾನ್ಯ ಅಧ್ಯಕ್ಷರೇ. ನಾನು ಮಂತ್ರಿಯಾದ ೧೦ ದಿವಸಗಳಲ್ಲಿಯೇ ಚುನಾವಣೆ ಬಂದಿತು. ಆ ಚುನಾವಣೆಯ ಪ್ರಚಾರಕ್ಕಾಗಿ ನಾವು ಹೋಗಬೇಕಾಗಿ ಬಂತು. ಆ ಚುನಾವಣೆಯಲ್ಲಿ ನಾವು ಸೋತು ಹೋದೆವು ಆದರೆ ನನಗೆ ಅಧಿಕಾರ ಇನ್ನು ಒಂದು ವಾರ ಇದ್ದಿದ್ದರೆ ಖಂಡಿತವಾಗಿ ಹೇಳುತ್ತೇನೆ, ಆ ಹರಿಹರ ಪಾಲಿಫೈಬರ್ಸ್‌ರವರಿಗೆ ಸರ್ಕಾರದವರು ಮಾಡಿಕೊಟ್ಟಿದ್ದ ಅಗ್ರಿಮೆಂಟ್ ಕ್ಯಾನ್ಸಲ್ ಮಾಡಿ ಪಶ್ಚಿಮಘಟ್ಟಗಳನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೆ. ಆದರೆ ಅಧಿಕಾರ ನಮ್ಮ ಕೈಯಲ್ಲಿ ಬಹಳ ದಿವಸಗಳು ಉಳಿಯಲಿಲ್ಲ. ನಾವು ರಾಜೀನಾಮೆಯನ್ನು ಕೊಟ್ಟೆವು.

೧೧-೩೦ ಎ.ಎಂ.

ಏಳನೇ ತಾರೀಖಿಗೆ ಮುಖ್ಯಮಂತ್ರಿಗಳು ಎಲ್ಲರೂ ರಾಜೀನಾಮೆ ಕೊಡಬೇಕೆಂದು ಹೇಳಿದರು. ಎಂಟನೇ ತಾರೀಖಿಗೆ ಕ್ಯಾಬಿನೆಟ್ ಮೀಟಿಂಗ್ ಆಯಿತು. ಯಾವರೀತಿಯಲ್ಲಿ ಕ್ಯಾಬಿನೆಟ್ ಮೀಟಿಂಗ್ ನಡೆಯುತ್ತದೆ ಎಂದು ನಾನು ನೋಡಿದ್ದು ಅದೇ ಮೊದಲ ಸಲ. ಇವತ್ತು ಪಾಪ ದೇವರಾಜ ಅರಸರು ನಮ್ಮ ಮುಂದೆ ಇಲ್ಲ. ನಾನು ಒಟ್ಟು ೩೧ ಜನ ಮಂತ್ರಿಗಳು ಇದ್ದೆವು. ಆ ಸಭೆಯಲ್ಲಿ ೨೬ ಮಂತ್ರಿಗಳು

ಒಟ್ಟಾಗಿದ್ದೆವು. ಅಲ್ಲಿದ್ದಂತಹ ಅಧಿಕಾರಿಗಳನ್ನು ಹೊರಗೆ ಕಳುಹಿಸಿ ಒಂದು ಮಾತನ್ನು ಹೇಳಿದರು— Look year my dear friends, now I have nothing to offer you. I am a Chief Minister only for a day or two. But if anybody wants to part from me, let us part one another as good friends or else if you all support me, I will need you. ೨೬ ಜನರು ಎಲ್ಲರೂ ಹೇಳಿದರು "Sir, we all stand behind you" ಒಬ್ಬರು ಹೇಳಿದರು "Sir, if you ask me to jump into a well, I will jump in the well" ಎಂದು. ಆದರೆ ಅಧ್ಯಕ್ಷರೇ, ಬರೇ ನಾಲ್ಕು ದಿವಸಗಳಲ್ಲಿ ಒಬ್ಬರೂ ಇಲ್ಲ. ಒಬ್ಬರಾದ ಮೇಲೆ ಒಬ್ಬರು ಹೊರಟುಹೋದರು. ಅದಕ್ಕಾಗಿ ನಾನು ಹೇಳಿದೆ. ನನಗೆ ವಿಧಾನಸೌಧದಲ್ಲಿ ಸರಿಯಾಗಿ ೫೮ ದಿವಸ ಕೂತುಕೊಳ್ಳಲಿಕ್ಕೆ ಸಮಯ ಸಿಕ್ಕಿದ್ದರೆ ಖಂಡಿತವಾಗಿಯೂ ನಾನು ಈ ಕೆಲಸವನ್ನು ಮಾಡುತ್ತಿದ್ದೆ ನನಗೆ ಅನುಕಂಪ ಇತ್ತು. ಕೆಲವು ಅಧಿಕಾರಿಗಳು ನಿಜವಾಗಿಯೂ ಸಹಾಯ ಮಾಡಿದರು. ಎಲ್ಲ ಅಧಿಕಾರಿಗಳು ಎಂದು ನಾನು ಹೇಳುವುದಿಲ್ಲ. ಈ ಅರಣ್ಯವನ್ನು ಸಂರಕ್ಷಣೆ ಮಾಡಬೇಕು ಎನ್ನತಕ್ಕಂಥ ನಿರ್ಧಾರ ಇವತ್ತು ಅವರ ಮನಸ್ಸಿನಲ್ಲಿದೆ. ಆದರೆ ಇವತ್ತು ಅವರಿಗೆ ಮಾಡಲಿಕ್ಕೆ ಬಿಡುತ್ತಿಲ್ಲ. ಆದ್ದರಿಂದ ನಿಮ್ಮನ್ನು ನಾನು ಕೇಳುತ್ತಿದ್ದೇನೆ. ಈ ಕೆಲಸವನ್ನು ಏಕೆ ಮಾಡಿದಿರಿ ? ೧೭ ಪ್ಲೈವುಡ್ ಇಂಡಸ್ಟ್ರೀಯವರಿಗೆ ಕೊಟ್ಟಿರುವ ಅಗ್ರಿಮೆಂಟ್ ಪ್ರತಿಗಳು ನನ್ನ ಕೈಯಲ್ಲಿದೆ. ೧೭ ಪ್ಲೈವುಡ್ ಇಂಡಸ್ಟ್ರೀಸ್‌ರವರಿಗೆ ಕೊಟ್ಟಿರತಕ್ಕಂಥಾದ್ದು ಐದು ವರ್ಷಗಳ ಅವಧಿಗೆ. Permission was granted to extract timber from such and such an area and that agreement was valid only for a period of five years. ಆದರೆ, ಒಬ್ಬ ವ್ಯಕ್ತಿಗಾಗಿ ಎಲ್ಲಾ ಕಾನೂನುಗಳನ್ನು ಮುರಿದು ಕಾನೂನಿಗೆ ಅತೀತವಾಗಿ ೩೦ ವರ್ಷಗಳವರೆಗೆ ಕಾವೇರಿ ಜಲಾಯನ ಪ್ರದೇಶದಲ್ಲಿ ಕೊಟ್ಟಿದ್ದೀರಲ್ಲ, ನಿಮ್ಮ ಮನಸ್ಸಿಗೆ ಸಂತೋಷವೆ ? ಕಾವೇರಿ ನದಿ ಬರಡಾದರೆ ನಿಮಗೆ ಸಂತೋಷವೆ ? ಕಾವೇರಿ ತಾಯಿ ಇವತ್ತು ಮುನಿಸಿಕೊಂಡಿದ್ದಾಳೆ. ನೀವು ಮಾಡುತ್ತಿರುವ ಅನಾಚಾರ ಅತ್ಯಾಚಾರ ನೋಡಿ ನೋಡಿ ಒಂದು ವರ್ಷವಾದರೂ ಬರಗಾಲ ಏಕೆ ಮಾಡಬಾರದು ಎನ್ನುವ ಒಂದು ತೀರ್ಮಾನಕ್ಕೆ ಆಕೆ ಬಂದಿದ್ದಾಳೆ ಎಂದು ಕಾಣುತ್ತದೆ. ೧೭ ಪ್ಲೈವುಡ್ ಇಂಡಸ್ಟ್ರಿಗಳಿಗೆ ಹೊಸದಾಗಿ ಕೊಟ್ಟಿರತಕ್ಕಂಥ ಅಗ್ರಿಮೆಂಟ್‌ನ್ನು ಖಂಡಿತವಾಗಿ ರದ್ದು ಮಾಡಬೇಕಾದ ಅವಶ್ಯಕತೆ ಇವತ್ತು ಇದೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎವರ್‌ಗ್ರೀನ್ ಫಾರೆಸ್ಟ್ ಕೇವಲ ಶೇಕಡಾ ೫ರಷ್ಟು ಮಾತ್ರ ಇದೆ. We have to maintain ecological balance. ಈ ಕಾನೂನನ್ನು ಮಾಡಲು ಅಧಿಕಾರಿಗಳನ್ನು ಕೇಳಿ. ಹೇಗೆ ಮಾಡಬೇಕೆಂದು ಬರೆದು ಕೊಡುತ್ತಾರೆ. ಯಾವ ರೀತಿ ಠರಾವು ಮಾಡಬೇಕೆಂದು ಅವರು ಹೇಳುತ್ತಾರೆ. ಈ ರಾಷ್ಟ್ರದ, ಈ ಕರ್ನಾಟಕದ ಹಿತದೃಷ್ಟಿಯಿಂದ—We have witnessed erratic monsoon and for the survival of human race and to regulate ecological balance all agreements entered into shall stand cancelled. ಎಕೊಲಾಜಿಕಲ್ ಬ್ಯಾಲನ್ಸ್‌ಗೋಸ್ಕರ ಪ್ಲೈವುಡ್ ಇಂಡಸ್ಟ್ರಿಗಳಿಗೆ ಮರವನ್ನು ಕೊಡತಕ್ಕಂಥ ಕ್ರಮವನ್ನು ರದ್ದು ಮಾಡುತ್ತೇವೆ ಎಂದು ಒಮ್ಮತದಿಂದ ಹೇಳಿದರೆ ಯಾವುದೇ ಉಚ್ಚ ನ್ಯಾಯಾಲಯ ಇದಕ್ಕೆ ಖಂಡಿತವಾಗಿಯೂ ಅಡ್ಡ ಬರುವುದಿಲ್ಲವೆಂದು ನಾನು ಸಾರಿಸಾರಿ ಹೇಳುತ್ತೇನೆ. ಈ ಮರಗಳನ್ನು ಕಡಿಯುವುದನ್ನು ಸರ್ಕಾರದ ಅಧಿಕಾರಿಗಳಿಂದ ತಪ್ಪಿಸುವುದಕ್ಕೆ ಆಗುವುದಿಲ್ಲ. ಅವರು ಹೇಗೆ ಬರುತ್ತಾರೆ ಎಂದರೆ ಒಂದು ಅರ್ಜಿ ಕೊಡುತ್ತಾರೆ. ಆರ್ಡರ್ ಹೇಗೆ ಮಾಡುತ್ತಾರೆ ಎಂಬುದನ್ನು ನಾನು ನೋಡಿದ್ದೇನೆ. ನಾನು ಸ್ವಲ್ಪ ದಿವಸ ಮಂತ್ರಿಯಾಗಿದ್ದೆ. ಅರ್ಜಿಯ ಎಡಭಾಗದಲ್ಲಿ ಎರಡನೇ ಕಾಲಮ್‌ನಲ್ಲಿ 'Permission may be granted to fell all matured trees' ಎಂದು ಆರ್ಡರ್ ಮಾಡುತ್ತಾರೆ. ಇದು ಅವರು ಮಾಡತಕ್ಕಂಥ ಆರ್ಡರ್ ಇದರ ಹಿನ್ನಲೆಯಲ್ಲಿ ಅವರದೊಂದು ವರ್ಕಿಂಗ್ ಪ್ಲಾನ್ ಇರುತ್ತದೆ. ಒಂದು ಸಮಯ ಎಲ್ಲಿಯಾದರೂ ದೊಡ್ಡ ದೊಡ್ಡ ಮರಗಳು ಬಿದ್ದು ಹೋಗುತ್ತವೆ ; ಇದರಿಂದ ಸರ್ಕಾರದ ಬೊಕ್ಕಸಕ್ಕೆ ತೊಂದರೆಯಾಗುತ್ತದೆ ಎಂದು ಒಂದು ಎಕರೆಗೆ ೩-೪ ಮರಗಳಿಗೆ ಮೀರದಂತೆ ಕಡಿಯಬೇಕೆಂದು ವರ್ಕಿಂಗ್ ಪ್ಲಾನ್ ಇದೆ. ಇದರ ಬಗ್ಗೆ ಕಳೆದ ಎರಡು ವರ್ಷಗಳಿಂದ ಹೇಳುತ್ತಿದ್ದೇನೆ. ಇದರ ಬಗ್ಗೆ ಹೊಸ ಬೆಳಕನ್ನು ಚೆಲ್ಲಬೇಕು. ಪಶ್ಚಿಮ ಘಟ್ಟದ ಅರಣ್ಯದಲ್ಲಿರತಕ್ಕಂಥ ನಾಲ್ಕು ಮರಗಳನ್ನು ಕಡಿಯುವುದಕ್ಕೆ ಲೈಸೆನ್ಸ್ ಕೊಟ್ಟರೆ ಅಲ್ಲಿ ನಲ್ವತ್ತು ಮರಗಳು ಬೀಳುತ್ತವೆ. ಈ ಒಂದು ವರ್ಕಿಂಗ್ ಪ್ಲಾನನ್ನು ಆಧಾರವಾಗಿಟ್ಟುಕೊಂಡು ಇವತ್ತು ಏನು ನಡೆಯುತ್ತಿದೆ ಎಂಬುದನ್ನು ಸರ್ಕಾರ ಗಮನಿಸಿಲ್ಲ. ವೆಸ್ಟ್ರನ್ ಘಾಟ್ಸ್‌ನಲ್ಲಿ ಹದಿನೇಳು ಕೇಸುಗಳಲ್ಲಿ ಒಂದು ಕೇಸು ಹೇಳುತ್ತೇನೆ.

ದಯವಿಟ್ಟು ಅದನ್ನು ವಿಚಾರಣೆ ಮಾಡಿ. ಜಮ್ಮಾ ಮಲೈಯಲ್ಲಿ ೩೦೦ ಎಕರೆಯಲ್ಲಿ ಮರ ಕಡಿಯಲು ಪರವಾನಗಿಯನ್ನು ಕೊಟ್ಟಿದ್ದಾರೆ ಏಕೆಂದರೆ, ಅದು ಕಾವೇರಿ ಜಲಾಯನ ಪ್ರದೇಶ. ಈ ವ್ಯಕ್ತಿಗೆ ಮೂರು ಭಾಗಗಳಲ್ಲಿ ಜಮ್ಮಾಮಲೈ ಫಾರೆಸ್ಟ್ ಕೊಟ್ಟಮೇಲೆ ನಿಷೇಧ ಮಾಡಿದ್ದೀರಿ. ಏಕೆಂದರೆ, ಅವರು ಸ್ವಲ್ಪ ಹಣ ಮಾಡಿಕೊಳ್ಳಲಿ ಎಂದು. ಸ್ವಲ್ಪ ಹಣ ಅಲ್ಲ, ಎರಡು ಕೋಟಿ ರೂಪಾಯಿಗಳನ್ನು ಅವರು ಮಾಡಿಕೊಂಡರು. ಮುನ್ನೂರು ಎಕರೆ ಇರತಕ್ಕಂಥ ಪ್ರದೇಶದಲ್ಲಿ ಎಷ್ಟು ಮರಗಳನ್ನು ವರ್ಕಿಂಗ್ ಪ್ಲಾನ್ ಪ್ರಕಾರ ತೆಗೆದುಕೊಂಡು ಹೋಗಬಹುದು ? ಒಂದು ಎಕರೆಗೆ ಮೂರು ಅಥವಾ ನಾಲ್ಕು ಮರ ಗಳಂತೆ ಒಟ್ಟು ೧೨೦೦ ಮರಗಳನ್ನು ಅವರು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಇದೆ. ೧೨೦೦ ಮರಗಳಿಗೆ ಒಂದು ಮರ ೫೦-೬೦ ಕ್ಯೂಬಿಕ್ ಫೀಟ್ ಎಂದುಕೊಂಡರೆ ೧೨೦೦ ಮರಗಳಿಗೆ ೬೦,೦೦೦ ಕ್ಯೂಬಿಕ್ ಫೀಟ್ ಆಯಿತು. ಅವರು ಕೊಟ್ಟ ಬೆಲೆ ಒಂದು ಕ್ಯೂಬಿಕ್ ಫೀಟ್‌ಗೆ ಐದು ರೂಪಾಯಿ. ಅರವತ್ತು ಸಾವಿರ ಕ್ಯೂಬಿಕ್ ಫೀಟ್ ಮರಕ್ಕೆ ಮೂರು ಲಕ್ಷ ಮಾತ್ರ ಸೀನಿಯರೇಜ್ ದರ ಕೊಡ ಬೇಕಾಗುತ್ತದೆ, ಈ ವರ್ಕಿಂಗ್ ಪ್ಲಾನನ್ನು ಆಧಾರವಾಗಿಟ್ಟುಕೊಂಡ ಮೇಲೆ ಅಧಿಕಾರಿಗಳು ಮರ ಕಡಿಯಲು ಅನುಮತಿಯನ್ನು ಕೊಟ್ಟಿದ್ದೇ ಆದರೆ ಸರ್ಕಾರಕ್ಕೆ ಮೂರು ಲಕ್ಷದಿಂದ ನಾಲ್ಕು ಲಕ್ಷ ರೂಪಾಯಿಯಷ್ಟು ಸೀನಿಯರೇಜ್ ದರ ಬರಬೇಕಾಗುತ್ತದೆ. ಆದರೆ ಈ ಮುನ್ನೂರು ಎಕರೆಯಲ್ಲಿ ಇವರು ೪೦,೦೨೭ ಸಾವಿರದಷ್ಟು ಸೀನಿಯರೇಜ್ ವ್ಯಾಲ್ಯೂ ಕೊಟ್ಟಿದ್ದಾರೆ. ಹಾಗಾದರೆ ಅಲ್ಲಿ ಮರ ಏನಾದರೂ ಉಳಿದೀತೆ ? ಅವರು ಪೂರ್ತಿ ಮರಗಳನ್ನು ತೆಗೆದಿದ್ದಾರೆ. ಒಂದಾದರೂ ಮರ ಬಿಟ್ಟಿಲ್ಲ. ಮಾನ್ಯ ಮಾದೇಗೌಡರೇ, ಇದನ್ನು ನೋಡಿ ನಾನು ಹೇಳುತ್ತಿದ್ದೇನೆ. ಯಾವ ಅರಣ್ಯದಲ್ಲಿ ವರ್ಕಿಂಗ್ ಪ್ಲಾನ್ ಪ್ರಕಾರ ಒಂದು ಎಕರೆಗೆ ನಾಲ್ಕು ಮರಗಳನ್ನು ಕಡಿಯಲು ನಿಯಮ ಇದೆ, ಈ ನಿಯಮವನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿ ಸಂಪೂರ್ಣ ಮರಗಳನ್ನು ಕಡಿದು ನಲ್ವತ್ತು ಲಕ್ಷ ರೂಪಾಯಿಗಳಷ್ಟು ಸೀನಿಯರೇಜ್ ರೇಟ್‌ನ್ನು ಕೊಟ್ಟಿದ್ದಾರೆ. ಇದನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿದ್ದರಿಂದ ೧ ಕೋಟಿ ೨೦ ಲಕ್ಷ ರೂಪಾಯಿ ಅವರಿಗೆ ಸಿಕ್ಕಿದೆ. ಯಾರೇ ಆಗಲಿ ಪ್ಲೈವುಡ್ ಬೆಲೆ ಒಂದು ಕ್ಯೂಬಿಕ್ ಫೀಟ್‌ಗೆ ೩೦ ರಿಂದ ೩೫ ರೂಪಾಯಿ ಇದೆ. ಹೀಗಿರುವಾಗ ನಿಮ್ಮ ವರ್ಕಿಂಗ್ ಪ್ಲಾನ್ ಎಲ್ಲಿ ಹೋಯಿತು? ಇದರ ವಿಚಾರ ಏನು ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ನಾನು ಅರಣ್ಯ ಮಂತ್ರಿಯಾಗಿದ್ದಾಗ ಈ ಸೀನಿಯರೇಜ್ ದರವನ್ನು ಗಗನಕ್ಕೆ ಏರಿಸಬೇಕೆಂದು ಸಲಹೆ ಯನ್ನು ಕೊಟ್ಟಿದ್ದವನು ನಾನು. ಹೀಗಾದರೂ ಆದರೆ ಮರ ಕಡಿಯುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾದೀತು ಎಂದು ನಾನು ಭಾವಿಸಿದ್ದೆ. An amount of exercise was done. Kindly ask your officers to take it up very seriously.

ಅದನ್ನು ಮಾಡಿ ಆದ ಮೇಲೆ ಏನಾಯಿತು ಅಂದರೆ, ಸರ್ಕಾರದವರು, ಅಧಿಕಾರಿಗಳು, ಇದನ್ನೆಲ್ಲಾ ಸಂಪೂರ್ಣವಾಗಿ ಪರಿಶೀಲನೆ ಮಾಡಿ ೧೯ ಫೆಬ್ರವರಿ ೧೯೮೧ ರಲ್ಲಿ ಒಂದು ಸೀನಿಯರೇಜ್ ರೇಟನ್ನು ತಂದರು. ಅದು ನಿಮಗೆ ಗೊತ್ತಿರಬೇಕು, ನಾನು ಹೇಳುವುದಲ್ಲ. ೧೯ ನೇ ಫೆಬ್ರವರಿ ೧೯೮೧ ರಲ್ಲಿ ನಿಮ್ಮ ದಸ್ಕತ್ತಾಗಿ ಬಂದಿದೆ ಸ್ವಾಮಿ. ೧೯-೨-೧೯೮೧ ರಲ್ಲಿ ೧೪೨ ಮರಗಳು, ಡಿಫರೆಂಟ್ ಪೀಸಸ್ ಆಫ್ ಟಿಂಬರ್ ಯಾವುದು ಇದೆ ಅದಕ್ಕೆ ದರವನ್ನು ಹೆಚ್ಚು ಮಾಡಿ ಫಾರೆಸ್ಟ್ ಮಿನಿಸ್ಟರಾದ ಮಾನ್ಯ ಮಾದೇಗೌಡರ ದಸ್ಕತ್ ಆಧಾರದ ಮೇಲೆ ನೋಟಿಫಿಕೇಷನ್ ಇಷ್ಯೂ ಆಗತಕ್ಕಂಥದ್ದು ನಿಮಗೆ ಗೊತ್ತಿದೆ. ನೀವು ಆ ಒಂದು ನೋಟಿಫಿಕೇಷನ್‌ನ್ನು ಇಷ್ಯೂ ಮಾಡಿದಿರಿ. ವಿಧಾನಸಭೆಯಲ್ಲಿ ಕರ್ನಾಟಕ ಫಾರೆಸ್ಟ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕು ಎಂದು ತಂದಿರಿ. ೧೦೧-ಎ ಎಂದು ಹೇಳತಕ್ಕ ತಿದ್ದು ಪಡಿಯನ್ನು ವಿಧಾನಸಭೆಗೆ ತಂದಾಗ ಅದನ್ನು ಮುಕ್ತ ಕಂಠದಿಂದ ನಾವು ಸ್ವಾಗತ ಮಾಡಿದೆವು. ಇದಕ್ಕಿಂತ ಮುಂಚೆ ಸರ್ಕಾರದವರು ಹಲವಾರು ಫ್ಯಾಕ್ಟರಿಗಳವರ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಂಡಿರತಕ್ಕಂಥ ಸಂದರ್ಭದಲ್ಲಿ ಆ ಅಗ್ರಿಮೆಂಟ್‌ಗಳನ್ನು ಮಾಡಿಫೈ ಮಾಡಲಿಕ್ಕೆ, ಎನ್.ಎಲ್. ಮಾಡಲಿಕ್ಕೆ ಕ್ಯಾನ್ಸಲ್ ಮಾಡಿ ದರಗಳನ್ನು ರೈಸ್ ಮಾಡಲಿಕ್ಕೆ ಎಲ್ಲಾ ಅಧಿಕಾರಗಳನ್ನು ಈ ಅಮೆಂಡ್‌ಮೆಂಟ್‌ನಲ್ಲಿ ಅಳವಡಿಸಿ ಕೊಳ್ಳಲಿಕ್ಕೋಸ್ಕರ ತಿದ್ದುಪಡಿಯನ್ನು ವಿಧಾನಸಭೆಗೆ ತಂದಾಗ ಅದನ್ನು ನಾನು ಸ್ವಾಗತ ಮಾಡಿದೆ. ಈಗಲಾದರೂ ಒಳ್ಳೆಯ ಕೆಲಸವನ್ನು ನೀವು ಮಾಡಿದಿರಲ್ಲ ದಯವಿಟ್ಟು ಇದರ ಆಧಾರದ ಮೇಲೆ ಎಲ್ಲಾ ಅಗ್ರಿಮೆಂಟ್‌ಗಳನ್ನು ಕ್ಯಾನ್ಸಲ್ ಮಾಡಲಿಕ್ಕೆ ಇರತಕ್ಕ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಹೇಳಿ ಅದನ್ನು ನಾನು ಸ್ವಾಗತ ಮಾಡಿದ್ದೇನೆ. '೧೦೧-ಎ' ನಲ್ಲಿ ಏನು ಹೇಳಿದ್ದೀರಿ ಅಂದರೆ;

"The holder of a lease or agreement or any other document granted or entered into prior to the commencement of the

Karnataka Forest (Amendment Act, 1980 and providing for supply of any tree, wood timber or other forest produce by the State Government, shall notwithstanding anything contained in the instrument of lease or agreement or other document or in any law in force at such commencement, pay, in respect of such tree, wood, timber or other forest produce, received by him after such commencement, valued (by whatever name called) at the rate for the time being specified in the rules made or orders issued under sub-section (1) in respect of such tree, wood, timber or other forest produce."

"(3) The holder of any such lease, agreement or document granted or entered into after the commencement of the Karnataka Forest (Amendment) Act, 1980, notwithstanding anything contained in such lease, agreement or document shall, pay, in respect of any tree, wood, timber or other forest produce, received by him, valued at the rate for the time being specified in the rules made or orders issued under Sub Section (1) in respect of such tree wood, timber or other forest produce."

"(4) The rate specified in the rules made or orders issued under Sub Section (1) may be modified from time to time by the Chief Conservator of Forests; Provided that......"

This is the crux of the matter.

"Provided that the Chief Conservator of Forests shall not enhance the rate or value in respect of any tree, wood, timber or other forest produce more than once during any period of two years."

This is the amendment you have brought. ಈ ಅಮೆಂಡ್‌ಮೆಂಟ್ ಆಧಾರದ ಮೇಲೆ ಅಂಡರ್ ಸೆಕ್ಷನ್ ೧೦೨ ಆಫ್ ದಿ ಫಾರೆಸ್ಟ್ ಆಕ್ಟ್ ತಾವು ಏನು ಮಾಡಿದಿರಿ ಅಂದರೆ ತಾವು ನೋಟಿಫಿಕೇಷನ್ ಇಷ್ಯೂ ಮಾಡಿದಿರಿ. ಅದರಲ್ಲಿರತಕ್ಕ ಅಧಿಕಾರ ಯಾರಿಗೆ? ಅದನ್ನು ಓದಿ ಹೇಳುತ್ತೇನೆ. I will also read the rule making clause regarding who has got the power to fix the seigniorage value

"The powers of the Forest Officer in respect of sale of forest produce:-

Categories of officers specified in Column (2) of the table below may exercise the powers specified in the cor esponding eutries in Column (3) thereof in respect of forest produce..."

ಇದರಿಂದ ಅವರಿಗೆ ಮರಗಳ ದರಗಳನ್ನು ಹೆಚ್ಚಿಸಲಿಕ್ಕೆ ಅಧಿಕಾರವಿದೆ. ಈ ಒಂದು ಅಮೆಂಡ್‌ಮೆಂಟನ್ನು ಸದನದಲ್ಲಿ ತಂದಿರಿ. ದಿನಾಂಕ ೧೯–೨–೧೯೮೧ ರಲ್ಲಿ ಅವರು ಎಲ್ಲಾ ಮರಗಳ ದರಗಳನ್ನ ಹೆಚ್ಚಿಸಿದರು.

೨೩-೨-೧೯೮೧ ರಿಂದ ಎಲ್ಲಾ ಮರಗಳ ದರಗಳು ಜಾರಿಗೆ ಬಂತು. ಅದರಲ್ಲಿ ೪೦ ರೂಪಾಯಿಯಿಂದ ೧೪೫ ರೂಪಾಯಿವರೆಗೆ ಹೋಯಿತು. ಪರ್ ಕ್ಯೂಬಿಕ್ ಮೀಟರ್ ಹಳೇ ರೇಟು ಇದ್ದದ್ದು ೩೭೦ ರೂಪಾಯಿಯಿಂದ ೯೦೦ ರೂಪಾಯಿವರೆಗೆ ಅವರು ಏರಿಸಿದರು. ಯೂಕಲಿಪ್ಟಿಸ್ ಒಂದು ಬಿಟ್ಟರೆ ಬಾಕೀದಕ್ಕೆ ಕಾಸ್ಟ್ ಆಫ್ ಪ್ರೊಡಕ್ಷನ್, ಮಾರ್ಕೆಟ್ ವ್ಯಾಲ್ಯು, ಫಿನಿಷ್ಡ್ ಗೂಡ್ಸ್‌ಗೆ ಮಾರ್ಕೆಟ್‌ನಲ್ಲಿರತಕ್ಕ ದರ ಇದೆಲ್ಲವನ್ನೂ ಅಧಿಕಾರಿಗಳು ವಿಚಾರಮಾಡಿ ೨೩-೨-೧೯೮೧ ರಲ್ಲಿ ಒಂದು ನೋಟಿಫಿಕೇಷನ್ ತಂದರು, ಅದು ಬಂದ ಮಾರನೇ ದಿವಸ ಬಂತು ನೋಡಿ ಕತೆ. ಎಲ್ಲಾ ಪ್ಲೇವುಡ್ ಮ್ಯಾನುಫ್ಯಾಕ್ಚರರ್ಸ್ ಬೆಂಗಳೂರಿಗೆ ಬಂದರು. ಪರ್ ಕ್ಯೂಬಿಕ್ ಮೀಟರ್‌ಗೆ ೪೦ ರಿಂದ ೧೪೦ ವರೆಗೆ ಇದ್ದಂಥ ರೇಟು ೩೭೦ ರಿಂದ ೯೦೦ ರೂಪಾಯಿವರೆಗೆ ಏರಿಕೆ ಮಾಡಿ ಕಾನೂನು ಪ್ರಕಾರ ನೋಟಿಫಿಕೇಷನ್ ಇಷ್ಯೂ ಮಾಡಿದ ಮೇಲೆ ಪ್ಲೇಉಡ್ ಮ್ಯಾನುಫ್ಯಾಕ್ಚರರ್ಸ್, ಮರ ಖದೀಮರು ಬೆಂಗಳೂರಿಗೆ ಬಂದರು. ಸರ್ಕಾರ ವಿಧಾನಸಭೆಗೆ ಅರಣ್ಯ ಕಾಯಿದೆಗೆ ತಿದ್ದುಪಡಿ ಮಾಡಲು ತಂದು, ಇಲ್ಲಿ ಮಂಜೂರಾತಿ ತೆಗೆದುಕೊಂಡು ಆ ತತ್ವಕ್ಕನು ಗುಣವಾಗಿ ರೇಟುಗಳನ್ನು ಜಾಸ್ತಿಮಾಡಿ ನೋಟಿಫಿಕೇಷನ್ ಇಷ್ಯೂಮಾಡಿ, ರೂಲ್ ಮಾಡಿ ಫೆಬ್ರವರಿ ೨೩ ನೇ ತಾರೀಖಿನಿಂದ ಅದನ್ನು ಜಾರಿಗೆ ಕೊಡಬೇಕು ಎಂದು ತಂದಾಗ ಮರ ಖದೀಮರು ಸರ್ಕಾರಕ್ಕೆ ರೆಪ್ರೆಸೆಂಟೇಷನ್ ಕೊಟ್ಟರು, ಅವರು ರೆಪ್ರೆಸೆಂಟೇಷನ್ ಕೊಟ್ಟರು ಎನ್ನುವ ಆಧಾರದ ಮೇಲೆ ಅದಕ್ಕೆ ಇವರು ತಡೆಯಾಜ್ಞೆ ಕೊಟ್ಟರಲ್ಲ, ಹಾಗಾದರೆ ಕಾಯಿದೆಗೆ ತಿದ್ದುಪಡಿಮಾಡಲು ಅನುಮತಿ ಕೊಟ್ಟ ಈ ವಿಧಾನಸಭೆಗೆ ತಾವು ಕೊಟ್ಟ ಗೌರವ ಏನು; ಈ ತಿದ್ದುಪಡಿಯನ್ನು ಏತಕ್ಕೋಸ್ಕರ ತಂದಿರಿ, ತಾವು ತಂದಿರತಕ್ಕ ನೋಟಿಫಿಕೇಷನ್‌ನನ್ನು ೫ ದಿವಸಗಳಲ್ಲಿ ತಡೆಯಾಜ್ಞೆ ಮುಖಾಂತರ ನಿಲ್ಲಿಸಬೇಕಾದರೆ ಈ ಸರ್ಕಾರಕ್ಕೆ ಯಾವ ಪ್ರಬಲವಾದಂಥ ಒತ್ತಡ ಇತ್ತು ಎಂದು ನಾನು ನೇರವಾಗಿ ಕೇಳುತ್ತಿದ್ದೇನೆ. ಇದು ಮಾಡಿ ಆದಮೇಲೆ ಸ್ಟೇ ಕೊಟ್ಟರು, ಹಳೇ ದರದಲ್ಲಿ ಅವರಿಗೆ ಮಾರಿಬಿಡಿರಿ ಎಂದು ಹೇಳಿದರು. ಅವರು ಹಳೇ ದರದಲ್ಲಿ ಮರಗಳನ್ನು ತೆಗೆದುಕೊಂಡು ಹೋಗಿದ್ದೇ ಹೋಗಿದ್ದು. ಹುಚ್ಚು ಮುಂಡೇ ಮದುವೇಲಿ ಉಂಡವನೇ ಜಾಣ ಎಂದಹಾಗೆ ಎಲ್ಲಾ ತೆಗೆದುಕೊಂಡು ಹೋದರು. ಪುನಃ ನಾನು ಅವರನ್ನು ಕೇಳಿಕೊಂಡೆ. ಈ ರೀತಿ ಏಕೆ ಮಾಡಿದಿರಿ, ಸರ್ಕಾರಕ್ಕೆ ಬರತಕ್ಕಂಥ ಆದಾಯ ಕಡಿಮೆಯಾಯಿತು. ಯೂಕಲಿಪ್ಟಿಸ್ ಒಂದನ್ನು ಬಿಟ್ಟು ಸೀನಿಯ ರೇಜ್ ರೇಟ್ ವ್ಯಾಲ್ಯು ಹೆಚ್ಚಿಸಿದ್ದರಿಂದ ಸರ್ಕಾರಕ್ಕೆ ಒಂದು ವರ್ಷಕ್ಕೆ ಬರತಕ್ಕ ಆದಾಯ ೧೭ ಕೋಟಿ ರೂಪಾಯಿಗಳು. ಯೂಕಲಿಪ್ಟಿಸ್ ದರ ೨೪-೩೦ ಮತ್ತು ೬೫ ಇತ್ತು. ನೋಟಿಫಿಕೇಷನ್‌ನಲ್ಲಿ ಒಂದು ಟನ್‌ಗೆ ೮೧೦ ರೂಪಾಯಿ ಪ್ರಕಾರ ಏರಿಸಿದ್ದರಿಂದ ರಾಜ್ಯದ ಬೊಕ್ಕಸಕ್ಕೆ ಒಂದು ವರ್ಷಕ್ಕೆ ೨೪ ಕೋಟಿ ರೂಪಾಯಿ ಆದಾಯ ಬರಬೇಕಾಗಿತ್ತು. ಆದರೆ ಇವರು ಅದನ್ನು ತರಾತುರಿಯಾಗಿ ತಂದರು. ಕಳೆದ ಸದನದಲ್ಲಿ ಕಳೆದ ವಾರದಲ್ಲಿ ಮಾನ್ಯ ಬೊಮ್ಮಾಯಿಯವರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅರಣ್ಯ ಇಲಾಖೆಗೆ ಸಂಬಂಧಪಟ್ಟ ವರದಿಯನ್ನು ಇಲ್ಲಿ ಮಂಡನೆ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಮಾನ್ಯ ಸಚಿವರು ನಾನು ಒಂದು ಹೇಳಿಕೆ ಕೊಡಬೇಕಾಗಿದೆಯೆಂದು ಹೇಳಿದರು. ನಮ್ಮ ರಿಪೋರ್ಟ್ ಮುಂದೆ ಮಾಡಿದರೆ ಏನು ತಪ್ಪಾಗುತ್ತದೆ ಎಂದು ಹೇಳಿದೆವು. ನಂತರ ಏನಾಯಿತು ಎನ್ನುವುದು ನಿಮಗೆ ಚೆನ್ನಾಗಿ ಗೊತ್ತಿದೆ. ನಾವೂ ವಾದ ಮಾಡಿದೆವು, ನೀವು ಮಾಡುತ್ತಾ ಇರತಕ್ಕ ಹೇಳಿಕೆ ಯಾವುದು ಇದೆ ಅದು ಲೆಕ್ಕಪತ್ರ ಪರಿಶೋಧನಾ ಸಮಿತಿಯವರು ಮಾಡಿರತಕ್ಕ ಶಿಫಾರಸು ಗಳಿಗೆ ಏನಾದರೂ ಸಂಬಂಧ ಆಗುವುದಿದ್ದರೆ ದಯವಿಟ್ಟು ಮಾಡಲಿಕ್ಕೆ ಕೂಡದು ಎನ್ನತಕ್ಕ ವಾದ ಮಾಡಿದೆವು. ಆದರೂ ಮಾನ್ಯ ಮಂತ್ರಿಗಳು ಹೇಳಿಕೆ ಮಾಡಿ ಆದ ಮೇಲೆ ಗೊತ್ತಾಯಿತು. ಏನೆಂದರೆ, ೪೦ ರೂಪಾಯಿಯಿಂದ ೧೪೦ ರೂಪಾಯಿ ಹಳೇ ಕಾಲದಲ್ಲಿದ್ದುದನ್ನು ಅಧಿಕಾರಿಗಳು ೩೭೦ ರೂಪಾಯಿ ಯಿಂದ ೯೦೦ ರೂಪಾಯಿಗೆ ಏರಿಸಿದ್ದರು. ನಂತರ ಇವರು ೯೦೦ ರೂಪಾಯಿಯಿಂದ ೪೭೦ ಮತ್ತು ೧೭೫ ರೂಪಾಯಿಗೆ ಇಳಿಸಿದರು.

೧೧-೩೦ ಎ.ಎಂ.

ಅಂದರೆ ೧೭೫ ರಿಂದ ೪೭೦ಕ್ಕೆ ಏರಿಸಿದಿರಿ. ಮತ್ತೆ ಯೂಕಲಿಪ್ಟಸ್‌ನ್ನು ನಿಮ್ಮ ನೋಟಿಫಿಕೇಷನ್ ಪ್ರಕಾರವಾಗಿ ಒಂದು ಟನ್ನಿಗೆ ೮೧೦ ರೂಪಾಯಿ ಮಾಡಿದಿರಿ. ಆತುರಾತುರವಾಗಿ ಮತ್ತೆ ೨೧೦ಕ್ಕೆ ಇಳಿಸಿ ದಿರಿ. ಈ ರೀತಿ ಇಳಿಸಿದುದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಆಗತಕ್ಕ ನಷ್ಟ ಎಷ್ಟು ಎಂದರೆ ೮೧೦ ರೂಪಾಯಿಗಳ ಪ್ರಕಾರವಾಗಿದ್ದರೆ ೨೪ ಕೋಟಿ ರೂಪಾಯಿಗಳು ನಮ್ಮ ರಾಜ್ಯದ ಬೊಕ್ಕಸಕ್ಕೆ ಬರು ತ್ತಿತ್ತು. ಆದರೆ ಈಗ ೨೧೦ ರೂಪಾಯಿಗಳ ಹಾಗೆ ಮಾಡಿರುವುದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ

ಬರತಕ್ಕಂಥಾದ್ದು ಕೇವಲ ೬ ಕೋಟಿ, ಅಂದರೆ ೧೮ ಕೋಟಿ ರೂಪಾಯಿ ಒಂದು ವರ್ಷಕ್ಕೆ ಲಾಸ್ ಆಗುತ್ತಿದೆ.

ಶ್ರೀ ಜಿ. ಮಾದೇಗೌಡ.—ಈಗ ನಾವು ಸೀನಿಯರೇಜ್ ರೇಟ್‌ನ್ನು ಜಾರಿಗೆ ಕೊಟ್ಟಿಲ್ಲ. ಆಮೇಲೆ ನಾವು ೧೯೮೧ರಲ್ಲಿ ರೇಟ್‌ನ್ನು ರಿವೈಜ್ ಮಾಡಿದ್ದೇನೆ. ಅದರ ಪ್ರಕಾರವಾಗಿ ನಾವು ವಸೂಲು ಮಾಡಿದ್ದೇವೆ. ತಾವು ೨೪ ಕೋಟಿ ರೂಪಾಯಿ ಬರುತ್ತಿತ್ತು ಎಂದು ಹೇಳುತ್ತಿದ್ದೀರಿ. ಆದರೆ ಅದರ ಪ್ರಕಾರವಾಗಿ ನಾವು ಅವರಿಗೆ ಅಷ್ಟು ಸಪ್ಲೈ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳಿದ್ದೇವೆ. ಪಿ.ಎ.ಸಿ.ಯವರೂ ಕೂಡ ೧೭ ಕೋಟಿ ರೂಪಾಯಿಗಳ ಆದಾಯ ಬರುತ್ತಿತ್ತು ಅದು ಲಾಸ್ ಆಗಿದೆಯೆಂದು ಹೇಳಿದ್ದಾರೆ. ಆದುದರಿಂದ ಮಾನ್ಯ ನಾಣಯ್ಯನವರು ತಮ್ಮ ವಾದವನ್ನು ಸಮರ್ಥನೆ ಮಾಡುವ ದೃಷ್ಟಿಯಿಂದ ಹೇಳುತ್ತಿದ್ದಾರೆಯೇ ಹೊರತು, ಅದು ಸರಿಯಲ್ಲ. ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಸರ್ಕಾರಕ್ಕೆ ಬರತಕ್ಕಂಥ ಆದಾಯ ಇಷ್ಟು ಹೋಗುತ್ತದೆಂದು ಪೇಪರ್‌ನಲ್ಲಿ ಹೇಳಿಕೆ ಕೊಟ್ಟಿದ್ದೀರಿ. ಇದರಿಂದ ಸಾರ್ವಜನಿಕರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆದುದರಿಂದ ತಾವು ವಾದ ಮಾಡುವಾಗ, ಅದು ಸಾಮಾನ್ಯ ಜನರಿಗೂ ಅರ್ಥವಾಗುವ ಹಾಗೆ, ಒಪ್ಪುವ ಹಾಗೆ ಹೇಳಬೇಕು. ಮತ್ತೆ ಬೇರೆ ರಾಜ್ಯಗಳಲ್ಲಿ ಏನು ರೇಟ್ ಇದೆ, ನಮ್ಮ ರಾಜ್ಯದಲ್ಲಿ ಯಾವ ರೇಟನ್ನು ನಾವು ಫಿಕ್ಸ್ ಮಾಡಿದ್ದೇವೆ ಎಂಬುದನ್ನೂ ಸಹ ತಾವು ನೋಡಿ ನೀವು ವಾದ ಮಾಡಬೇಕು. ಆಗ ಏನಾದರೂ ನಿಮ್ಮ ವಾದದಲ್ಲಿ ಅರ್ಥವಿದ್ದು, ನಾವು ತಪ್ಪು ಮಾಡಿದ್ದರೆ ಅದನ್ನು ನಾವು ತಿದ್ದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಸರಿಯಾಗಿಯೇ ಕೇಳಿದ್ದಾರೆ. ಕಮಿಟಿಯವರು ಇಲಾಖೆಯವರು ಕೊಟ್ಟ ವಿವರದ ಮೇಲೆಯೇ ರಿಪೋರ್ಟ್ ಬರೆದಿದ್ದದ್ದು ಮತ್ತು ಪತ್ರಿಕೆಗೆ ಹೇಳಿಕೆ ಕೊಟ್ಟಿರುವುದು. ಸ್ವಾಮಿ, ೨೩-೨-೧೯೮೧ರಲ್ಲಿ ಈ ರೂಲ್ಸ್‌ನ್ನು ಜಾರಿಗೆ ತಂದಿದ್ದೀರಿ. ಇದನ್ನು ಜಾರಿಗೆ ತರುವುದಕ್ಕಿಂತ ಮುಂಚಿತವಾಗಿ ನಿಮ್ಮ ಅರಣ್ಯ ಇಲಾಖೆಯವರು ಮರಗಳನ್ನು ಬೆಳೆಯುವುದಕ್ಕೆ ಆಗತಕ್ಕಂಥ ಖರ್ಚು, ಮಾರ್ಕೆಟ್‌ನಲ್ಲಿರತಕ್ಕ ಮರಗಳ ಬೆಲೆ ಎಲ್ಲವನ್ನೂ ವರ್ಕ್ ಔಟ್ ಮಾಡಿ ನಮಗೆ ಮಾಹಿತಿಯನ್ನು ಕೊಟ್ಟರು. ಹಾಗೆಯೇ ತಾವೂ ಸಹ ಈ ರೂಲ್ಸ್‌ನ್ನು ಮಾಡುವುದಕ್ಕಿಂತ ಮುಂಚಿತವಾಗಿ ನಿಮ್ಮ ಇಲಾಖೆಯವರನ್ನು ಕರೆಸಿ ಅಧ್ಯಯನ ಮಾಡಿ ರೂಲ್ಸ್ ಮಾಡಿದರೇ ? ಸ್ವಾಮಿ, ತಾವು ರೂಲ್ಸ್ ಮಾಡುವುದಕ್ಕಿಂತ ಮುಂಚಿತವಾಗಿ ನಮ್ಮ ಸಮಿತಿಯ ಮುಂದೆ ನಿಮ್ಮ ಅಧಿಕಾರಿಗಳು ಬಂದು ಎವಿಡೆನ್ಸ್ ಕೊಟ್ಟಿದ್ದಾರೆ. ಸೈಂಟಿಫಿಕ್ ಆಗಿ ನಿಮ್ಮ ಡಿಪಾರ್ಟ್‌ಮೆಂಟಿನವರು ಕೊಟ್ಟ ಅಂಕಿ ಅಂಶಗಳ ಆಧಾರದ ಮೇಲೆ ಮತ್ತು ಹಣಕಾಸಿನ ಇಲಾಖೆಯವರು ಪರಿಶೀಲನೆ ಮಾಡಿದ ಮೇಲೆ ಬೆಲೆ ನಿಗದಿ ಮಾಡಿರತಕ್ಕದ್ದು ಯೋಗ್ಯ ಎನ್ನುವ ಮಾತನ್ನು ಕ್ಯಾಬಿನೆಟ್‌ನಲ್ಲಿ ಒಪ್ಪಿಕೊಂಡ ಮೇಲೆ ಈ ರೂಲ್ಸನ್ನು ಒಪ್ಪಿಕೊಂಡಿರಾ ಎನ್ನುವುದನ್ನು ತಾವೇ ಹೇಳಬೇಕು. ೮೦೦ ರೂಪಾಯಿಗಳ ಹಾಗೆ ಫಿಕ್ಸ್ ಮಾಡಿ ಜಾರಿಗೆ ಕೊಟ್ಟಿದ್ದರೆ ಅದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಎಷ್ಟು ಆದಾಯ ಬರುತ್ತಿತ್ತು ಎಂದು ಲೆಕ್ಕಾಚಾರ ಹಾಕಿ ನಿಮ್ಮ ಗೌವರ್ನ್‌ಮೆಂಟ್ ಸ್ಪೋಕ್ಸ್‌ಮೆನ್ ಹೇಳಿದ್ದಾರೆ. ಆದುದರಿಂದ ನಿಮ್ಮ ಅಧಿಕಾರಿಗಳು ಕೊಟ್ಟ ಅಂಕಿಸಂಖೆಗಳ ಆಧಾರದ ಮೇಲೆಯೇ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುತ್ತಿದ್ದ ೧೭ ಕೋಟಿ ರೂಪಾಯಿಗಳು ಲಾಸ್ ಆಗುತ್ತಿದೆಂದು ಹೇಳಿಕೆ ಕೊಟ್ಟಿದ್ದೇವೆ ಮತ್ತು ವರದಿಯಲ್ಲಿ ಸಹ ಹೇಳಿದ್ದೇವೆ. ಆದುದರಿಂದ ಬೇರೆ ರಾಜ್ಯಗಳಲ್ಲಿ ಏನು ದರವಿದೆ, ನಿಮ್ಮಲ್ಲಿ ಎಷ್ಟು ಇದೆ ಎಂಬುದನ್ನು ನೀವೇ ಹೇಳಿ ? ನಮಗೆ ಹೇಗೆ ಗೊತ್ತಾಗುತ್ತದೆ.

ಶ್ರೀ ಜಿ. ಮಾದೇಗೌಡ.—ನಿಮ್ಮ ರಿಪೋರ್ಟ್‌ನಲ್ಲಿಯೂ ಕೊಟ್ಟಿದ್ದೀರಿ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ) —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಇಲಾಖೆಯ ಮಂತ್ರಿಯವರು ಮತ್ತು ಮಾನ್ಯ ಕಾರ್ಮಿಕ ಇಲಾಖೆಯ ಮಂತ್ರಿಯವರು ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಬೆಂಬಲಿಸುತ್ತಾ ಆ ವಿಚಾರದಲ್ಲಿ ಎರಡು ಮಾತು ಗಳನ್ನು ಆಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಅರಣ್ಯ ಇಲಾಖೆಯ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರು ನಮ್ಮ ಸರ್ಕಾರದ ಮೇಲೆ ಸತತವಾಗಿ ಧಾಳಿ ನಡೆಸುತ್ತಿದ್ದಾರೆ. ಮೊದಲು ಲೆಕ್ಕಪತ್ರ ಸಮಿತಿಯವರು ಈ ಸಿಮೆಂಟ್ ಸ್ಕಾಂಡಲ್ ಬಗ್ಗೆ ಒಂದು ವರದಿಯನ್ನು ಸಲ್ಲಿಸಿದರು. ಅದು ಅವರ ಕಾರ್ಯವ್ಯಾಪ್ತಿಗೆ ಸೇರಿರತಕ್ಕಂಥಾದ್ದಲ್ಲ. ಈಗ ಈ ಅರಣ್ಯ ಇಲಾಖೆಯಲ್ಲಿ ನಡೆದಿರತಕ್ಕಂಥ ಅವ್ಯವಹಾರದಿಂದ ಸರ್ಕಾರಕ್ಕೆ ಆಗಿರತಕ್ಕಂಥ ಹಣದ ಲುಕ್ಸಾನನ್ನು ಎತ್ತಿ ತೋರಿಸತಕ್ಕಂಥ ರೀತಿಯಲ್ಲಿ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಇದೂ ಕೂಡ ಅವರ ಕಾರ್ಯವ್ಯಾಪ್ತಿಗೆ ಸೇರಿದ್ದಲ್ಲ. ಇದರ ಬಗ್ಗೆ ನಾನು ನಾಳೆ ಇಲ್ಲಿ ಹಕ್ಕುಚ್ಯುತಿ ನಿರ್ಣಯವನ್ನು ತರುವವನಿದ್ದೇನೆ. ಇದಕ್ಕೆ ಕಾರಣವಿಷ್ಟೆ ನಾನು ರಾಜ್ಯ ಸರ್ಕಾರದ ಅಂದಾಜು ಸಮಿತಿಯ ಅಧ್ಯಕ್ಷನಾಗಿದ್ದೇನೆ. ಪ್ರತಿಯೊಂದು ಇಲಾಖೆಯ ಲೆಕ್ಕಪತ್ರಗಳನ್ನು, ಖರ್ಚುವೆಚ್ಚಗಳನ್ನು ವೀಕ್ಷಣೆ ಮಾಡತಕ್ಕಂಥಾದ್ದು ನಮ್ಮ ಅಂದಾಜು ಸಮಿತಿಯ ಆದ್ಯ ಕರ್ತವ್ಯವಾಗಿದೆ. ಈ ಬಗ್ಗೆ ಈ ಸದನದ ಕೆಲವು ಕಾನೂನುಗಳನ್ನು ಮಾಡಿದೆ. ಅದರಲ್ಲಿ ಯಾವ್ಯಾವ ಸಮಿತಿಯ ಕರ್ತವ್ಯ

ಗಳು ಏನೇನು ಎಂಬುದನ್ನೆಲ್ಲಾ ಸಂಪೂರ್ಣವಾಗಿ ವಿಂಗಡಿಸಿ ಹೇಳಿದ್ದಾರೆ. ಈ ವಿಚಾರದಲ್ಲಿ ಲೆಕ್ಕಪತ ಸಮಿತಿಯವರು ಯಾವಾಗ ಕಾರ್ಯಪ್ರವೃತ್ತರಾಗಬೇಕು ಎಂದರೆ. ಆಡಿಟರ್ ಜನರಲ್‌ರವರು ಯಾವುದೇ ಇಲಾಖೆಯ ಲೆಕ್ಕಪತ್ರಗಳನ್ನು ಅವರ ಮುಂದೆ ಇಟ್ಟಾಗ ಮಾತ್ರ ಅವರು ಕಾರ್ಯಪ್ರವೃತ್ತರಾಗಬೇಕು, ಇಲ್ಲದಿದ್ದರೆ ಇಲ್ಲ. ಅದು ನನಗೆ ಚೆನ್ನಾಗಿ ಗೊತ್ತಿದೆ.

SRI A. LAKSHMISAGAR.—Sir, I am on a Point of Order. Several Committees elected by the House and the Upper House are the Committees which are functioning within the framework of the rules framed by the Legislature. After the Committees having had sufficient time and due deliberations on several matters which they have had an occasion to go through, have submitted reports to this House and the reports have been placed on the Table of the House. After having accepted the reports, now it is too late for any hon'ble Member to find fault with them by making a running commentary over the reports. The reports of the several committees are the reports of this House. It is as if this House has had an occasion to go through the matters dealt with in the reports. Now it is too late to make a running commentary over the reports.

SRI S. M. SHEERNALY M. CHANDRASHEKAR.—Sir, he cannot make use of a Point of Order for giving explanation.

SRI A. LAKSHMISAGAR.—Sir, my submission to you is that he should not be permitted to say on the reports of the Committees of this House. It is not open to him. If he feels very strongly about the reports he may have some other occasion or some other method by which he can ventillate his grievances, but not through on a discussion which is taking place on Forest, Mines Geology and Labour Demands. The remarks he has been persuading himself to make are derogatory to the dignity, resprct and authority of this House. He shall not be permitted to make such remarks.

SRI S. M. SHEERNALY CHANDRA SHEKAR.—Sir, I am sorry. He has used harsh words.

MR. DEPUTY SPEAKER.—The committees are constituted by this House and they are part and parcel of this House. It is better that you should not make comments on the working of the Committees.

ಶ್ರೀ ವೈ. ರಾಮಕೃಷ್ಣ.—ಈ ಕಮಿಟಿಗಳನ್ನು ರಚನೆ ಮಾಡಿರುವವರು ನಾವೇ. ಈ ಕಮಿಟಿಯವರು ಕೊಟ್ಟಿರುವ ವರದಿಯ ಮೇಲೆ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವ ದೃಷ್ಟಿಯಿಂದ ಅವರು ಕೇಳುತ್ತಿದ್ದಾರೆ.

The hon'ble Member is well within his rights to...

SRI S. M. SHEERNALY CHANDRASHEKAR.—Sir, I am Speaking as the Chairman of the Committee on Estimates and not as an ordinary Member.

SRI H. GANGADHARAN.—But you should not comment on the working of the Committee.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ಈ ಕಮಿಟಿಯವರು ಏನು ಫ್ಯಾಕ್ಟ್ಸ್ ಕೊಟ್ಟಿದ್ದಾರೆ ಮತ್ತು ಆ ಕಮಿಟಿಯವರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಮಾನ್ಯ ಸ್ನೇಹಿತರು ಪ್ರಶ್ನೆ ಮಾಡುತ್ತಿದ್ದಾರೆ, ಆದರೆ ಆ ಪ್ರಶ್ನೆಯನ್ನು ಮಾಡುವಂತಹ ಸಂದರ್ಭ ಬೇರೆ ರೀತಿ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕರ್ತವ್ಯ ಏನು ? ಮತ್ತು ಎಸ್ಟಿಮೇಟ್ ಕಮಿಟಿಯವರ ಕರ್ತವ್ಯ ಏನು ಎನ್ನುವುದನ್ನು ಅವರು ಡಿಫೈನ್ ಮಾಡುತ್ತಿದ್ದಾರೆ. ಆದರೆ ಎಲ್ಲಾ ಕಮಿಟಿಗಳವರಿಗೂ ಅವರವರ ಕರ್ತವ್ಯದ ಬಗ್ಗೆ ತಿಳಿವಳಿಕೆ ಇದೆ, ಒಂದು ಪರಿಮಿತಿಯಲ್ಲಿಯೇ ಕೆಲಸ ಮಾಡಿರುತ್ತಾರೆ. ಅವರ ವ್ಯಾಪ್ತಿಗೆ ಮೀರಿ ಯಾರೂ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಆ ರೀತಿಯಲ್ಲಿ ಮಾತನಾಡುವುದು......

ಶ್ರೀ ವೈ ರಾಮಕೃಷ್ಣ.—ಅವರು ಯಾವ ಪರಿಮಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಮತ್ತು ಅವರ ಆಡಿಟ್ ಅಕೌಂಟ್ಸ್‌ನ್ನು ಅಕೌಂಟೆಂಟ್ ಜನರಲ್‌ರವರು ಪರಿಶೀಲನೆ ಮಾಡಿದ ನಂತರ ಈ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು......

SRI B. V. KAKKILAYA.—Sir, I am on a Point Order.

ಮಾನ್ಯ ಅಧ್ಯಕ್ಷರೇ ಈ ಹಿಂದೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಒಂದು ವರದಿಯನ್ನು ತಯಾರು ಮಾಡಿ ಈ ಸದನದ ಮುಂದೆ ಇಟ್ಟರು. ಆದರೆ ಈ ಸರ್ಕಾರದವರು ಆ ವರದಿಯ ಮೇಲೆ ಏನು ಕ್ರಮ ತೆಗೆದುಕೊಂಡರು ? ಈ ಕಮಿಟಿಯವರು ತಮ್ಮ ವ್ಯಾಪ್ತಿಯನ್ನು ಮೀರಿ ಹೋಗಿಲ್ಲ. ಅದರ ವಿಷಯದಲ್ಲಿ ಚರ್ಚೆ ಮಾಡುವಂತಹ ಸಂದರ್ಭ ಬೇರೆ ಇದೆ. ಆ ಸಂದರ್ಭ ಬಂದಾಗ ಚರ್ಚೆ ಮಾಡೋಣ. ಆದರೆ ಆ ವಿಷಯವನ್ನು ಇವತ್ತು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಇದರ ಬಗ್ಗೆ ಅವರು ಚರ್ಚೆ ಮಾಡಬೇಕಾದರೆ ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಚರ್ಚೆ ಮಾಡಬೇಕು. ಅದನ್ನು ಬಿಟ್ಟು ಅವರು ಈ ರೀತಿಯಾಗಿ ಆ ವಿಷಯವನ್ನು ಪ್ರಸ್ತಾಪ ಮಾಡಿದರೆ ಈ ಸದನದ ಗೌರವ ಮತ್ತು ಘನತೆಗೆ ಚ್ಯುತಿ ತಂದಂತೆ ಆಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಜಿ. ಮಾದೇಗೌಡ.— ಮಾನ್ಯ ಸದಸ್ಯರಾದಂತಹ ಶ್ರೀಮಾನ್ ನಾನಯ್ಯನವರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯ ಬಗ್ಗೆ ಪ್ರಸ್ತಾಪ ಮಾಡಿದರು.

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಿದ್ದು ನೋಟಿಫಿಕೇಷನ್ ಬಗ್ಗೆ ಆದರೆ ಈ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯ ಬಗ್ಗೆ ಒಂದು ಮಾತನ್ನೂ ಸಹ ಆಡಲಿಲ್ಲ.

SRI G. MADEGOWDA.—We cannot convert this discussion on Demands to a discussion on the report of the Public Accounts Committee. But we can refer to one or two points......

(INTERRUPTION)

SRI H. GANGADHARAN.—Let him refer to the facts. We have no objection and we welcome it. But let him not comment on the working of the Committee.

MR. DEPUTY SPEAKER.—You can make use of the facts of the report of the Committee. But you cannot comment on the working of the Commitee. Let us keep up the dignity of the House.

ಶ್ರೀ ಎಸ್. ಎಂ. ಶೀನರ್ನಾಳಿ ಚಂದ್ರಶೇಖರ್.—ಸ್ವಾಮಿ, ಈ ಕಮಿಟಿಯವರು ತಮ್ಮ ವರದಿಯಲ್ಲಿ ತಪ್ಪು ಮಾಡಿದ್ದಾರೆ. ಅದನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ೧೯೮೧ನೇ ಇಸವಿಯ ಸೀನಿಯರೇಜ್ ರೇಟನ್ನು ಆಧಾರವಿಟ್ಟುಕೊಂಡು ಸರ್ಕಾರದ ಅನೇಕ ಕಂಪನಿಗಳಿಗೆ ಕೊಟ್ಟಿದ್ದಾರೆ ಎನ್ನುವಂತಹ ವಾದವನ್ನು ಅವರು ಏನು ಮಾಡಿದ್ದಾರೆ ಇದು ಸತ್ಯಕ್ಕೆ ದೂರವಾದ ಸಂಗತಿ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಈ ಸಂಬಂಧದಲ್ಲಿ ಅಧಿಕಾರಿಗಳು ವಿಷಯವನ್ನು ಸಮಗ್ರವಾಗಿ ತಿಳಿದುಕೊಂಡು ಇತ್ತೀಚಿನ ದರಗಳ ಮೇಲೆ ಅವರು ಕೊಟ್ಟಿದ್ದಾರೆ. ಮತ್ತು ೧೯೮೧ನೇ ಇಸವಿಯಲ್ಲಿ ಸರ್ಕಾರಕ್ಕೆ ಸುಮಾರು ೭-೮ ಕೋಟಿ ರೂಪಾಯಿಗಳು ಬಂದಿದೆ. ಇದನ್ನು ಅವರು ಲೆಕ್ಕಕ್ಕೆ ತೆಗೆದುಕೊಳ್ಳದೆ ಕೇವಲ ೧೯೮೧ರ ಸೀನಿಯರೇಜ್ ರೇಟ್‌ನ್ನು ತೆಗೆದುಕೊಂಡು ವರದಿಯನ್ನು ಸಲ್ಲಿಸಿದ್ದಾರೆ. ಇದನ್ನು ಬಹುಶಃ ರಾಜಕೀಯ ಉದ್ದೇಶವೆಂದರೆ ಗತ್ಯಂತರವಿಲ್ಲ.

Sri M. C. Nanaiah.—Sir, let him confine himself to the facts which are there in the report. He is trying to comment about the working of the Committee and he characterises that the report has been submitted on account of political motive. If this is the area where he comments, we must also have our say over it. Tomorrow when we speak on other Demands, we cannot comment on the working of the Estimates Committee. Can we do it ? We will not do it and we will never do it.

ಶ್ರೀ ಕೆ. ರಾಮ್‌ಭಟ್.—ಮಾನ್ಯ ಅಧ್ಯಕ್ಷರೇ, ನಿಯಮ ೨೫೭ರ ಪ್ರಕಾರ ಎಸ್ಟಿಮೇಟ್ ಕಮಿಟಿಯ ರಿಪೋರ್ಟ್ ಬಗ್ಗೆ ಆಗಲಿ ಅಥವಾ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯ ಬಗ್ಗೆ ಆಗಲಿ ಚರ್ಚೆ ಮಾಡಬೇಕಾದರೆ ಅದಕ್ಕೆ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಪಡೆದು ಚರ್ಚೆ ಮಾಡಬಹುದು. ಆದರೆ ಈಗ ಅರಣ್ಯ ಮತ್ತು ಲೇಬರ್ ಇಲಾಖೆಯ ಬೇಡಿಕೆ ಬಂದಾಗ ಚರ್ಚೆ ಮಾಡುವುದು ಸರಿಯಲ್ಲ.

ಶ್ರೀ ಎಸ್. ಎಂ. ಶೀನರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯ ಮೇಲೆ ತಂದಿರತಕ್ಕಂತಹ ಬೇಡಿಕೆಯ ಬಗ್ಗೆ ಹೇಳಿದರೆ ಈ ಕಮಿಟಿಯವರು ೧೯೮೧ನೇ ಸೀನಿಯರೇಜ್ ರೇಟ್ ತೆಗೆದುಕೊಳ್ಳದೆ......

Mr. Deputy Speakr.—You cannot comment on the working of the Committee. It is in-correct.

ಶ್ರೀ ಎಸ್. ಎಂ. ಶೀನರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಶ್ರೀಮಾನ್ ನಾಣಯ್ಯನವರು ಸವಿಸ್ತಾರವಾಗಿ ಮಾತನಾಡುತ್ತಿದ್ದಾಗ ಟನ್ ಪ್ರಕಾರ ಹೇಳಿದ್ದಾರೆ. ಆದರೆ ಮಾನ್ಯ ವಿರೋಧಪಕ್ಷದ ಸದಸ್ಯರು ಇರುವುದು ಮಾತನಾಡುವುದಕ್ಕೆ.

They have got every right to speak and they have the right to do something as Opposition Members.

Mr. Deputy Speaker.—If there is anything wrong, you can correct it. But do not say that it was done with a Political motive. It is not fair.

Sri M. C. Nanaiah.—It is unfortunate that Sri S. M. Sheernaly Chandrashekar always remains in the Ruling Party.

Mr. Deputy Speaker.—Let us come to the subject.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—(*)

---

* As directed by the chair the matter was not reorded.

SRI A. LAKSHMISAGAR.—Once again that sentence also cannot go into the records. My objection is that it casts aspersions on the working of the Committee the Report of which is already before the House and the House has given its seal of approval. If he has any grievances against the Report, other avenues are open to him. He shall not by circutious method comment on the Report which is already before the House Let him not welcome it. But he shall not be permitted to make any comments The House has already given......

(INTERRUPTION)

SRI S. M. SHEERNALY CHANDRASEKHAR.—I have a right to state this.

SRI A. LAKSHMISAGAR.—I am on a point of order. The hon. Member is trying to make a running commentary by way of casting aspersions on the working and also on the Reports which are before the House for which the House has already given its seal of approval If he does not agree with the conclusions reached by the Committee, other avenues are open to him. But this opportunity of speaking on the demands of a particular Department cannot be made use of for the purpose of whittling down the importance of the Reports of the Committees. This is my submission.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ತಾವು ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳಬೇಕಾಗುತ್ತದೆ.

MR. DEPUTY SPEAKER.—The Hon.Minister for Forest will be there to say something about its correctness or otherwise.

ಶ್ರೀ ಎ. ಲಕ್ಷ್ಮೀಸಾಗರ್.—ಕಮಿಟಿ ರಿಪೋರ್ಟ್ ಬಗ್ಗೆ ಯಾರು ಪ್ರಸ್ತಾಪ ಮಾಡಿದ್ದಾರೆ? ರಾಜಕೀಯ ಉದ್ದೇಶದಿಂದ ಮಾತನಾಡುತ್ತಿದ್ದಾರೆ. ಅವರೂ ಕೂಡ ಒಂದು ಕಮಿಟಿಯ ಚೇರ್ಮನ್ನರಾಗಿದ್ದರು.

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಚಂದ್ರಶೇಖರ್ ಅವರು 'ನಾಣಯ್ಯನವರೇ, ಈ ಫ್ಯಾಕ್ಟ್‌ಗಳನ್ನು ಎಲ್ಲಿಂದ ಗ್ಯಾದರ್ ಮಾಡಿದ್ದೀರಿ' ಎಂದು ಕೇಳಿ—"All facts you gathered It is well." ಎಂದು ಹೇಳಿದವರು ಈಗ ಈ ರೀತಿ ಹೇಳುತ್ತಿದ್ದಾರಲ್ಲ?

MR. DEPUTY SPEAKER.—It is the duty of the hon. Members to seek all the Papers. Please confine to the Debate

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸನ್ಮಾನ್ಯ ಅಧ್ಯಕ್ಷರೆ, ಅರಣ್ಯ ಇಲಾಖೆ ಬಹಳ ಸಮರ್ಥವಾಗಿ ಕೆಲಸ ಮಾಡುತ್ತಿದೆ. ಒಳ್ಳೊಳ್ಳೆಯ ಅಧಿಕಾರಿಗಳು ಇದ್ದಾರೆ. ಬಹಳ ಅರಿತಂಥವರು, ನುರಿತಂಥವರು ಕರ್ನಾಟಕ ರಾಜ್ಯ ಮಟ್ಟದಲ್ಲಿ ಸರಿಯಾದ ರೀತಿಯಲ್ಲಿ ಈ ಇಲಾಖೆಯನ್ನು ನಡೆಸಿಕೊಂಡು ಹೋಗುವ ಅಧಿಕಾರ ವೃಂದ ಅರಣ್ಯ ಇಲಾಖೆಯಲ್ಲಿದೆ. ಸನ್ಮಾನ್ಯ ಅರಣ್ಯ ಮಂತ್ರಿಗಳು ನನಗೆ ಬಹಳ ಆತ್ಮೀಯ ಮಿತ್ರರು. ಇದೊಂದು ನಮ್ಮ ದೌರ್ಭಾಗ್ಯ.

(ಸನ್ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಅದೇನೆಂದರೆ, ಕಳೆದ ಹತ್ತಾರು ವರ್ಷಗಳಿಂದ ಬಯಲು ಸೀಮೆಯವರೇ ಅರಣ್ಯ ಮಂತ್ರಿಗಳಾಗುತ್ತಿದ್ದಾರೆ. ಇದು ಏಕೋ ಏನೋ ನನಗೆ ಅರ್ಥವಾಗುತ್ತಿಲ್ಲ. ಹಿಂದೆ ಮಾನ್ಯ ಸಿ. ಎನ್. ಪಾಟೀಲರು, ಮತ್ತು ಮಾನ್ಯ ರಾಮೇಗೌಡರು ಅರಣ್ಯ ಮಂತ್ರಿಗಳಾಗಿದ್ದರು. ಈಗ ಮಾನ್ಯ ಮಾದೇಗೌಡರು ಅರಣ್ಯ ಮಂತ್ರಿಯಾಗಿದ್ದಾರೆ. ಮಂತ್ರಿಗಳಾಗುವುದಕ್ಕೆ ಮೊದಲು ಇವರು ಮ್ಯಾಪ್‌ನಲ್ಲಷ್ಟೇ ಅರಣ್ಯವನ್ನು ನೋಡಿದ್ದರೋ ಏನೋ......

ಶ್ರೀ ಬಿ. ಭಾಸ್ಕರ ಶೆಟ್ಟಿ.—ಹಿಂದೆ ನಾಣಯ್ಯನವರೂ ಕೂಡ ಮಂತ್ರಿಯಾಗಿದ್ದರಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅವರು ಮಂತ್ರಿಯಾಗಿ ತಮ್ಮ ಕುರ್ಚಿ ಹುಡುಕುವುದರೊಳಗೇ ಹೊರಟು ಹೋದರು.

ಅಧ್ಯಕ್ಷರು.—ಈ ಚರ್ಚೆಗೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಶ್ರೀಮಾನ್ ಮಾದೇಗೌಡರು ಬಹಳವಾಗಿ ಪ್ರಯತ್ನ ಪಡುತ್ತಿದ್ದಾರೆ. ಅವರಿಗೆ ಶಹಭಾಸ್‌ಗಿರಿ ಕೊಡಬೇಕು. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಪಿ ಡಬ್ಲ್ಯು ಡಿ ಮಂತ್ರಿಯಾಗುವ ಬದಲು ಅರಣ್ಯ ಮಂತ್ರಿಯಾಗಿದ್ದರೆ ಚೆನ್ನಾಗಿತ್ತು ಎಂದೆನಿಸುತ್ತದೆ. ಅರಣ್ಯದ ಬಗ್ಗೆ ಸ್ವಲ್ಪ ಮಾಹಿತಿ ಇದ್ದವರು ಅರಣ್ಯ ಮಂತ್ರಿಯಾಗಿದ್ದರೆ ಅವರು ಚೆನ್ನಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಹಾಗಂತ ನನಗೆ ಅರಣ್ಯ ಮಂತ್ರಿಯಾಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಏನಾಗಿದೆ ಎಂದರೆ, ದೇವರು ವರ ಕೊಟ್ಟರೂ ಪೂಜಾರಿ ಕೊಡುವುದಿಲ್ಲ ಎನ್ನುವ ಹಾಗೆ ಆಗಿದೆ. ಇವೊತ್ತು ನಾವು ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಂಡು ಹೆಚ್ಚೆಚ್ಚು ಪ್ರದೇಶದಲ್ಲಿ ಅರಣ್ಯ ಬೆಳಸಿ ನಾಡಿನ ಉದ್ಧಾರ ಮಾಡಬೇಕೆಂದು ಹೊರಟಿದ್ದೇವೆ ನಿಷ್ಠಾವಂತರಲ್ಲಿ ಇದರ ಬಗ್ಗೆ ಕಳಕಳಿ ಇದೆ. ಆದರೆ ಏನಾಗುತ್ತಿದೆ ಎಂದರೆ, ರೇಂಜ್ ಫಾರೆಸ್ಟ್ ಆಫೀಸರುಗಳು ಲಂಚ ತೆಗೆದುಕೊಳ್ಳುವುದನ್ನು ಬಿಟ್ಟು ಬಿಟ್ಟಿದ್ದಾರೆ. ಆದರೆ ಸಸಿ ನೆಡುವ ಯೋಜನೆಯೊಳಗೆ ಲಂಚ ಯಾರಿಗೆ ಬೇಡ ತಿಂಗಳಿಗೆ ಏನಿಲ್ಲವೆಂದರೂ ೪–೫ ಸಾವಿರ ರೂಪಾಯಿ ಆದಾಯ ಮಾಡಿಕೊಳ್ಳುತ್ತಾರೆ. ಪಾಪ, ರೈತರು ಸಾಗುವಳಿ ಮಾಡುವಂತಹ ಜಮೀನಿನ ಮೇಲೆ ಸಸಿ ನೆಡುವುದಕ್ಕೆ ಹೋಗುತ್ತಾರೆ. ಇಷ್ಟು ವರ್ಷಗಳಿಂದ ಇಂತಿಂಥ ಕಡೆ ಸಸಿ ನೆಟ್ಟಿದ್ದೇವೆ ಎಂದು ಬಿಲ್ ಮಾಡಿ ಹಣ ತೆಗೆದುಕೊಳ್ಳುತ್ತಾರೆ. ಆದ್ದರಿಂದ ನಾನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ. ಅದೇನೆಂದರೆ, ಇಲಾಖೆಯವರು ಏನು ಸಸಿ ನೆಡತಕ್ಕ ಯೋಜನೆಯನ್ನು ಹಾಕಿದ್ದಾರೆ, ಇದನ್ನು ಸರಿಯಾದ ರೀತಿಯಲ್ಲಿ ಮಾಡಿದ್ದಾರೆಯೇ ಎಂದು ಕೇಳಬೇಕಾಗುತ್ತದೆ. ಇದರ ಬಗ್ಗೆ ಕೋಟ್ಯಾಂತರ ರೂಪಾಯಿ ವೆಚ್ಚವಾಗುವಾಗ ಅದು ಸರಿಯಾದ ದಾರಿಯಲ್ಲಿ ಹೋದರೆ ಮಾತ್ರ ರಾಜ್ಯಕ್ಕೆ ಕಲ್ಯಾಣವಾಗುತ್ತದೆ. ಆದರೆ, ನಮ್ಮ ದೌರ್ಭಾಗ್ಯದಿಂದ ಹಾಗೆ ಆಗುತ್ತಿಲ್ಲ. ಪದೇ ಪದೇ ನೆಟ್ಟ ಕಡೆಗಳಲ್ಲಿಯೇ ಪುನ: ಪುನ: ಸಸಿಗಳನ್ನು ನೆಡುತ್ತಾರೆ. ಇನ್ನು ಎಷ್ಟು ಸಸಿಗಳನ್ನು ನೆಡುತ್ತಾರೆ, ಅವುಗಳಲ್ಲಿ ಯಾವುದು ಬದುಕಿತ್ತು, ಯಾವುದು ಸತ್ತಿತ್ತು ಎಂದು ಕೇಳುವ ವ್ಯವಸ್ಥೆ ಇಲ್ಲ. ಇದನ್ನು ಈಗ ಕೇಳಲೇ ಬೇಕಾಗುತ್ತದೆ. ಇದನ್ನು ಬಿಟ್ಟು ಹೆಚ್ಚೆಚ್ಚು ಗಿಡಮರಗಳನ್ನು ಬೆಳೆಸಬೇಕೆಂದು ಅರಣ್ಯ ಇಲಾಖೆಯವರು ಏನು ದೊಡ್ಡ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಅದು ಖಂಡಿತ ಆಗುವುದಿಲ್ಲ. ಎರಡನೆಯದಾಗಿ, ಇವೊತ್ತು ನಮ್ಮಲ್ಲಿ ಚಕ್ರ, ವರಾಹಿ ಸಾವೆಹಕ್ಲು ಈ ಯೋಜನಾ ಪ್ರದೇಶದಲ್ಲಿ ದೊಡ್ಡ ಅರಣ್ಯಗಳು ನಾಶವಾಗುತ್ತಿವೆ. ಹಿಂದೆ ನಾವು ಚಿಕ್ಕಂದಿನಲ್ಲಿ ನೋಡುತ್ತಿದ್ದೆವು. ಆಗ ಕಾಡುಗಳಲ್ಲಿ ಸೂರ್ಯ ರಶ್ಮಿಯೇ ಕಾಣುತ್ತಿರಲಿಲ್ಲ. ಅಷ್ಟು ದಟ್ಟವಾಗಿ ಮರಗಳು ಬೆಳೆದಿರುತ್ತಿದ್ದವು. ಈಗ ಮಳೆಯೇ ಇಲ್ಲ. ಏಕೆಂದರೆ, ಕಾಡಿನಲ್ಲಿ ಮರಗಳೇ ಇಲ್ಲ. ಮರಗಳು ಹೆಚ್ಚಿದ್ದರೆ ತಾನೇ ಮಳೆ ಜಾಸ್ತಿಯಾಗಬೇಕು. ಮಳೆ ಇಲ್ಲ, ಬಯಲೇ ಎಲ್ಲಾ. ಇಂಡಿಸ್ಕ್ರಿಮಿನೇಟ್ ಆಗಿ ಕೊಟ್ಟಿದ್ದಾರೆ. ಕೈಮರ ಹುಲಿಕಲ್ ಕಡೆಗಳಲ್ಲಿ ಕಾಡುಗಳಲ್ಲಿ ಬರಲು ತೆಗೆದುಕೊಂಡು ಹೋದವರನ್ನು ಹಿಡಿದು ಒಳಗೆ ಹಾಕುತ್ತೀರಿ. ಮರಗಳ ನಾಶಕ್ಕೆ ಯಾರು ನಿಜವಾದ ಜವಾಬ್ದಾರರೋ ಅಂತಹವರನ್ನು ಹಿಡಿದು ಶಿಕ್ಷೆ ಕೊಡಬೇಕು ಕೋಟ್ಯಾಂತರ ರೂಪಾಯಿ ನಾಟಾಗಳಿಂದ ಲುಕ್ಸಾನು ಆಗುತ್ತಿದೆ. ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವಾಗ ಮರಗಳನ್ನು ಕಡಿಯುವವರಿಗೆ ಇಷ್ಟಿಷ್ಟು ಕಡಿಯಬೇಕೆಂದು ನಿಯಮ ಇರುವುದಿಲ್ಲವೆ? ಎಲ್ಲಾ ಕಡೆ ಮರಗಳನ್ನು ಕಡಿಯುತ್ತಾರೆ. ನಿಯಮಗಳನ್ನು ಉಲ್ಲಂಘನೆ ಮಾಡುತ್ತಾರೆ. ಇದರಿಂದಾಗಿ ನಮ್ಮ ಪ್ರಾಂತ್ಯ ಬಟ್ಟ ಬಯಲಾಗಿದೆ. ಹೀಗಾದರೆ ಅರಣ್ಯ ರಕ್ಷಣೆ ಮಾಡುವುದಾದರೂ ಹೇಗೆ ? ಇನ್ನಾದರೂ ಒಂದು ಯೋಜನೆಯನ್ನು ಮಾಡಿ ಅದನ್ನು ಕಾರ್ಯಗತ ಮಾಡಬೇಕಾದರೆ ಪ್ರತಿಯೊಂದು ಹಂತದಲ್ಲಿ ತಂಬಾ

ನಿಗಾ ಬೇಕಾಗುತ್ತದೆ. ಅನಂತರ ಸ್ವಾಮಿ, ನಮ್ಮ ಮಲೆನಾಡು ಪ್ರಾಂತ್ಯದಲ್ಲಿ ಎಲ್ಲೋ ಒಂದು ಕಡೆ ಕಟ್ಟಿಗೆ ಹಿಡಿದುಕೊಂಡು ಬಂದರೆ ಶಿಕ್ಷೆ ಕೊಡುತ್ತಾರೆ. ಶ್ರೀಮತಿ ಅನಿಬೆಸೆಂಟ್‌ರು ''ಬ್ರಿಟಿಷ್ ಸರ್ಕಾರ ಇದ್ದಾಗ ನಮಗೆ ಅನುಮತಿ ಕೊಟ್ಟಹಾಗೆ ಈಗ ಕಟ್ಟಿಗೆ ತರುವುದಕ್ಕೆ ಅವಕಾಶ ಕೊಡುತ್ತಿಲ್ಲ'' ಎಂದು ಹೇಳಿದ್ದಾರೆ. ಅಪರಾಧವೇ ಅಲ್ಲದಂತಹ ವಿಷಯಗಳಲ್ಲಿ ಶಿಕ್ಷೆ ಕೊಟ್ಟು ಮಲೆನಾಡಿನಲ್ಲಿರುವ ಜನರ ಹಕ್ಕು ಭಾದ್ಯತೆಗಳನ್ನು ಮೊಟಕು ಮಾಡುತ್ತಿದ್ದೀರಿ. ಎಲ್ಲಾ ಕಡೆಯೂ ಇದೇ ಕಥೆ ಪುನರಾವರ್ತನೆಯಾಗುತ್ತಿರುವುದು ಶೋಚನೀಯ. ಮಲೆನಾಡಿನಲ್ಲಿ ರೈತ ಕಟ್ಟಿಗೆಯನ್ನು ಬೆಳೆಸುವಾಗ ಆತನಿಗೆ ಕಟ್ಟಿಗೆ ಇಲ್ಲವೆಂದರೆ ಹೇಗೆ? ಬಯಲು ಸೀಮೆಯಂತೆ ಅಲ್ಲ, ಅಲ್ಲಿನ ಪರಿಸ್ಥಿತಿ. ಮಲೆನಾಡಿನಲ್ಲಿ ಪ್ರತಿಯೊಂದಕ್ಕೂ ಕಟ್ಟಿಗೆ ಬೇಕಾಗುತ್ತದೆ. ಹಳ್ಳಿ ಹಳ್ಳಿಗಳಲ್ಲಿ ಇವತ್ತು ಡಿಪೋಗಳನ್ನು ಮಾಡುವುದು ಸಾಧ್ಯವಿಲ್ಲ. ಆದರೆ ಹೊಸನಗರ, ಸಾಗರ ತೀರ್ಥಹಳ್ಳಿ ಇಂತಹ ತಾಲೂಕು ಕೇಂದ್ರಗಳಲ್ಲಿ ಡಿಪೋಗಳನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಇಲ್ಲದೆ ಹೋದರೆ ಅಲ್ಲಿನ ಜನರು ೫೦-೬೦ ಮೈಲಿ ದೂರದಿಂದ ಕಟ್ಟಿಗೆ ತರಬೇಕಾಗುತ್ತದೆ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸುವಿರಿ ? ಇಡೀ ಮರವನ್ನು ಕಡಿದು ಬುಡಮೇಲು ಮಾಡಿದವರಿಗೆ ಶಿಕ್ಷೆ ಇಲ್ಲ. ಆದರೆ ಬಿದ್ದಂತಹ ಮರದ ರೆಂಬೆಗಳನ್ನು ತೆಗೆದುಕೊಂಡು ಬಂದರೆ ಶಿಕ್ಷೆ ಕೊಡುತ್ತೀರಿ. ಈ ರೀತಿ ಶಿಕ್ಷೆ ಕೊಡುವುದಾದರೆ ಮುಂದೆ ಆಂಧೋಳನಕ್ಕೆ ಅವಕಾಶವಾಗುತ್ತದೆ. ಶೀರ್ನಾಳಿಯಿಂದ ಮತ್ತೆ ನಾನು ಚುನಾವಣೆಯಲ್ಲಿ ಗೆದ್ದು ಬರಲಾಗುವುದಿಲ್ಲ ಆದ್ದರಿಂದ ಮಲೆನಾಡಿನ ಜನರ ಹಕ್ಕು ಭಾದ್ಯತೆಗಳನ್ನು ಮೊಟಕು ಮಾಡುವ ಪ್ರಯತ್ನ ಮಾತ್ರ ಮಾಡಬೇಡಿ.

೫–೫೦ ಪಿ.ಎಂ.

ಅವರು ತಲೆ ಹೊರೆ ಮೇಲೆ ಸೌದೆ ತರುತ್ತಾರೆ. ಅದಕ್ಕೆ ಏಕೆ ೪–೫ ನೂರು ರೂಪಾಯಿ ಫೈನ್ ಹಾಕುತ್ತೀರಿ. ಅವರು ಕಾಡಿನಲ್ಲಿ ಬಿದ್ದಿರತಕ್ಕದ್ದನ್ನು ತಂದು ಉಪಯೋಗಿಸುತ್ತಾರೆ. ನಮ್ಮ ಶಿವಮೊಗ್ಗ ತಾಲ್ಲೂಕಿನಲ್ಲಿ ಹರಿಜನ–ಗಿರಿಜನರಿಗೆ ತಿನ್ನುವುದಕ್ಕೆ ಅನ್ನ ಇರುವುದಿಲ್ಲ. ಅವರು ಬೆಳಿಗ್ಗೆ ಎದ್ದರೆ ಸಂಪಾದನೆಗಾಗಿ ಪೇಟೆಗೆ ಬರಬೇಕು, ಬರುವಾಗ ತಲೆ ಹೊರೆ ಮೇಲೆ ಸೌದೆ ತರುತ್ತಾರೆ ಅವರಿಗೆ ಅದೇ ಜೀವನೋಪಾಯ ಮಾರ್ಗ, ಅದನ್ನು ಬಿಟ್ಟರೆ ಬೇರೆ ಮಾರ್ಗ ಇರುವುದಿಲ್ಲ. ಅಂಥದ್ದರ ಮೇಲೆ ಏಕೆ ಗಧಾಪ್ರಹಾರ ಮಾಡುತ್ತೀರಿ? ನೀವು ಬೇಕಾದರೆ ಚೆಕ್‌ಅಪ್ ಮಾಡಿ. ಅಂಥವರನ್ನು ರೇಂಜ್ ಆಫೀಸರ್ ಹಿಡಿದು ೫–೬ ನೂರು ರೂಪಾಯಿ ಫೈನ್ ಹಾಕಿದ್ದಾರೆ. ಇದನ್ನು ತಾವು ಮೊಫೈ ಮಾಡಿ ನೋಡಿ. ನಾನು ಅವರನ್ನು ಕೇಳಿದೆ, ತಲೆ ಹೊರೆ ಮೇಲೆ ಸೌದೆ ತೆಗೆದುಕೊಂಡು ಹೋಗುವುದಕ್ಕೆ ಏತಕ್ಕೆ ವಿರೋಧ ಮಾಡುತ್ತೀರಿ ಎಂದು. ಅದಕ್ಕೆ ಅವರು. ನಮಗೆ ಮೇಲಿನಿಂದ ಆ ರೀತಿ ಸೂಚನೆ ಇದೆ ಎಂದು ಹೇಳಿದರು. ಆ ಒಂದು ಕೆಲಸವನ್ನು ಮಾಡಿ ಜೀವನ ಮಾಡತಕ್ಕವರೆಲ್ಲ ಇಂದಿರಾ ಗಾಂಧಿ ಪುತ್ರರು. ಅವರ ಮೇಲೆ ನೀವು ಗಧಾಪ್ರಹಾರ ಮಾಡಿದರೆ ನಾಳೆ ನಮ್ಮ ಗತಿ ಮುಗಿಯುತ್ತದೆ, ಅವರೇನೋ ಇವತ್ತು ಕಣ್ಮುಚ್ಚಿಕೊಂಡು ಓಟು ಕೊಡುತ್ತಿದ್ದಾರೆ, ಅಂಥವರನ್ನು ತೆಗೆದುಕೊಂಡು ಹೋಗಿ ಈ ರೀತಿ ಮಾಡಿದರೆ ನಾಳೆ ದಿವಸ ನಮ್ಮ ಪರಿಸ್ಥಿತಿ ಕಷ್ಟವಾಗುತ್ತದೆ.

ಅಧ್ಯಕ್ಷರು.— ಕಣ್ಮುಚ್ಚಿಕೊಂಡು ಓಟು ಹಾಕುತ್ತಾರೆಂದರೆ ಅವರಿಗೆ ಬುದ್ಧಿ ಇಲ್ಲವೆಂದು ಅರ್ಥವಾಗುತ್ತದೆ. ಅವರನ್ನು ಅಷ್ಟು ಲಘುವಾಗಿ ಕಾಣಬಾರದು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಇಲ್ಲ. ಇವತ್ತಿನ ದಿವಸ, ನಮ್ಮ ಪ್ರಾಂತ್ಯ ಶರಾವತಿ, ವರಾಹಿ ಯೋಜನೆಗಳಿಂದ ಮುಳುಗಡೆಯಾಗುವ ಪ್ರಾಂತ್ಯವಾಗಿದೆ. ಒಂದು ಕಾಲದಲ್ಲಿ ಮುಳುಗಡೆ ಸಮಿತಿ ಎಂದು ಮಾಡಿದ್ದರು ಅವರು ಅಲ್ಲಿದ್ದಂತಹ ರೈತರುಗಳನ್ನು ತೆಗೆದುಕೊಂಡು ಬಂದು ಅರಣ್ಯ ಪ್ರದೇಶಗಳಲ್ಲಿ ಹಾಕಿ ಇಲ್ಲಿರತಕ್ಕ ಜಮೀನನ್ನು ಸಾಗುಮಾಡಿಕೊಂಡು ಇರಿ ಎಂದರು. ಇವತ್ತಿಗೂ ಅವರಿರತಕ್ಕಂಥ ಸ್ಥಳದಲ್ಲಿ ೨೫ ವರ್ಷದ ತೆಂಗಿನ ಮರಗಳು, ಅಡಕೆ ಮರಗಳು ಇವೆ. ಅವರನ್ನು ಒಮ್ಮೆಲೇ ಒಕ್ಕಲೆಬ್ಬಿಸಿದರೆ ಅವರು ಎಲ್ಲಿಗೆ ಹೋಗಬೇಕು? ನಿಜವಾದ ರೈತಾಪಿ ಜನರು ತಮ್ಮ ಕಸಬು ಮಾಡಿಕೊಂಡಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಮುಳುಗಡೆ ಸಮಿತಿಯನ್ನು ಮಾಡಿದ್ದರು ಆಯಾಯ ತಾಲ್ಲೂಕಂಗಳಲ್ಲಿ ರೇಂಜ್ ಫಾರೆಸ್ಟ್ ಅಧಿಕಾರಿಗಳು ತಾಲ್ಲೂಕು ಬೋರ್ಡ್ ಅಧ್ಯಕ್ಷರ ಅಧ್ಯಕ್ಷತೆಯ ಸಮಿತಿಗಳನ್ನು ಮಾಡಿ ಎಲ್ಲೆಲ್ಲಿ ಬಗರ್‌ಹುಕುಂ ಆಗಿದೆ ಎಂಬುದನ್ನು ತೋರಿಸಿಕೊಡಬೇಕೆಂದು ಆದೇಶ ನೀಡಿದರು. ಅದೆಲ್ಲ ಇವತ್ತು ವಿಧಾನ ಸೌಧಕ್ಕೆ ಬಂದಿದೆ. ಮಲೆನಾಡಿನ ಜನರು, ನಮಗೆ ಖಾಯಂ ಆಗಿ ಸಾಗುವಳಿ ಮಾಡುವ ಅವಕಾಶ ಸಿಗುತ್ತದೆಂಬ ಆಶಾಭಾವನೆ

ಯನ್ನು ಹೊಂದಿದ್ದರು, ಆದರೆ, ನೀವು ಏಕಾಏಕಿ ಅರಣ್ಯ ಪ್ರದೇಶಗಳನ್ನು ಕೇಂದ್ರ ಸರ್ಕಾರಕ್ಕೆ ವಹಿಸಿ ಕೊಟ್ಟಿದ್ದೀರಿ. ಈ ಸಮಸ್ಯೆಯನ್ನು ತೀರ್ಮಾನ ಮಾಡದೆ ಹೋದರೆ ನಮ್ಮ ಸಾಗರ, ಹೊಸನಗರ, ಶಿವಮೊಗ್ಗ ತಾಲ್ಲೂಕುಗಳಲ್ಲಿ ಬಹಳ ಕಷ್ಟ ಇದೆ. ಈಗ ಅಲ್ಲಿ ಅರಣ್ಯ ಪ್ರದೇಶವನ್ನು ಸಾಗು ಮಾಡಿ ಕೊಂಡಿರುವವರನ್ನು ಬಿಡಿಸುವುದಕ್ಕಾಗುವುದಿಲ್ಲ. ಅವರನ್ನು ಬಿಡಿಸಿದರೆ ಅವರು ಎಲ್ಲಿಗೆ ಹೋಗಬೇಕು? ಅವರು ಹಾಕಿ ಬೆಳೆಸಿರತಕ್ಕ ಸುಮಾರು ೨೦–೨೫ ವರ್ಷಗಳ ಅಡಿಕೆ ಮತ್ತು ತೆಂಗಿನ ಮರಗಳಿವೆ. ಆದುದ ರಿಂದ ಈಗಿರತಕ್ಕುದ್ದನ್ನು ಕೇಂದ್ರ ಸರ್ಕಾರಕ್ಕಾದರೂ ತೆಗೆದುಕೊಂಡು ಹೋಗಿ ಮಂಜೂರ್ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿ, ಮುಂದೆ ಸಾಗುವಳಿ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಶಿವಮೊಗ್ಗ ತಾಲ್ಲೂಕಿನ ಒಂದು ಭಾಗದಲ್ಲಿ ಸುಮಾರು ೪೦ ಕುಟುಂಬಗಳಿಗೆ ತಹಶೀಲ್ದಾರರು ದರಖಾಸ್ತು ಚೀಟಿಗಳನ್ನು ಕೊಟ್ಟಿ ದ್ದಾರೆ. ಆದರೆ ಅರಣ್ಯ ಇಲಾಖೆಯವರು ಆ ಜಮೀನು ನಮಗೆ ಸೇರಿದ್ದು, ನೀವು ಪ್ರವೇಶ ಮಾಡಬೇಡಿ ಎಂದು ಹೇಳುತ್ತಾರೆ. ಇದು ಹೇಗೆ ಎಂದು ನನಗಂತೂ ಅರ್ಥವಾಗುವುದಿಲ್ಲ. ರೈತಾಪಿ ಜನರ ಸ್ವಾಧೀನಕ್ಕೆ ಜಮೀನು ಬಂದ ಮೇಲೆ ಅದನ್ನು ಕಿತ್ತುಕೊಳುವುದು ಎಂದರೆ ಇದಕ್ಕಿಂತ ಅನ್ಯಾಯ ಇಲ್ಲ. ಅವರೇನು ಸಾವಿರಾರು ಎಕರೆ ಜಮೀನನ್ನು ಹೊಂದಿರುವವರಲ್ಲ, ಒಂದೆರಡು ಮೂರು ಎಕರೆ ಇರುವವರು ಅದನ್ನು ಬಿಟ್ಟರೆ ಅವರಿಗೆ ಬೇರೆ ಮಾರ್ಗವೇ ಇರುವುದಿಲ್ಲ. ಏತಕ್ಕೆ ಈ ಸರ್ಕಸ್ ಎಂದರೆ, ಅರಣ್ಯ ಬೆಳೆ ಸುವ ದೃಷ್ಟಿಯಿಂದ ಎಲ್ಲ ಭೂಮಿಯೂ ರೇಂಜ್ ಫಾರೆಸ್ಟ್ ಆಫೀಸರವರ ಕಣ್ಣಿಗೆ ಬೀಳುತ್ತಿದೆ. ಅವರಿಗೆ ಸಸಿ ನೆಡುವುದು ಬಿಲ್ ಮಾಡುವುದೇ ಕೆಲಸವಾಗಿದೆ. ಆದುದರಿಂದ, ಅವರಿಗೆ ಸರಿಯಾದ ಹದ್ದುಬಸ್ತು ತೋರಿ ಸದಿದ್ದರೆ ನಮ್ಮ ಪಕ್ಷಕ್ಕೆ ಬಹಳ ಅಪಾಯ ಇದೆ. ಏಕೆಂದರೆ, ಇದು ಚುನಾವಣೆಯ ಕಾಲ. ಹೊಸನಗರಕ್ಕೆ ಚಿಕ್ಕಮಗಳೂರಿನಿಂದ ಫಾರೆಸ್ಟ್ ಕಂಟ್ರಾಕ್ಟರ್ ಬಂದಿದ್ದಾರೆ, ಅವರು ಯಾರು ಎಂದು ಗೊತ್ತಿಲ್ಲ. ಅವರಿಗೆ ೮೦೦ ಎಕರೆ ಅರಣ್ಯ ಪ್ರದೇಶ ಮಂಜೂರಾಗಿದೆಯೆಂದು ತಿಳಿದುಬಂದಿದೆ. ಅವರು ಕಾರು, ಜೀಪು ಎಲ್ಲ ಇಟ್ಟುಕೊಂಡು ನುಗ್ಗಿದ್ದಾರೆ. ಅವರಿಗೆ ಪರವಾನಗಿ ಕೊಟ್ಟವರು ಯಾರು? ಅವರ ಹೆಸರನ್ನು ವೆರಿಫೈ ಮಾಡಿಕೊಳ್ಳಿ.

ಒಬ್ಬರು ಮಾನ್ಯ ಸದಸ್ಯರು.— ನಿಮ್ಮ ಪಕ್ಷದವರು ಇರಬೇಕು.

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.— ಯಾರಾದರೂ ಆಗಲಿ, ಲೂಟಿ ಮಾಡುವವರು ಎಲ್ಲ ಒಂದೇ. ಸರ್ಕಾರದ ಕಾಡಿನಿಂದ ಕಟ್ಟಿಗೆ ತೆಗೆದುಕೊಂಡು ಬರುವುದಕ್ಕೆ ರೈತನಿಗೆ ಅವಕಾಶವಿಲ್ಲವೆನ್ನು ವಾಗ ೫–೬ ನೂರು ಎಕರೆ ಜಮೀನನ್ನು ಲೂಟಿ ಮಾಡುವುದಕ್ಕೆ ಅವಕಾಶ ಸಿಗುತ್ತದೆಂದರೆ ಬಹುಶಃ ಇದ ಕ್ಕಿಂತ ಬೇರೆ ಅನ್ಯಾಯ, ದೌರ್ಜನ್ಯ ಇಲ್ಲವೆಂದು ಅಂದುಕೊಂಡಿದ್ದೇನೆ. ಇದಕ್ಕೆ ತಾವು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಇತ್ತೀಚೆಗೇನೋ ಸರ್ವೆ ಕಾರ್ಯ ನಡೆಯುತ್ತಿದೆ. ಅರಣ್ಯ ಇಲಾಖೆಯವರು ಏಕಾಏಕಿ ಕಣ್ಣು ತೆರೆದಿದ್ದಾರೆ. ರಾಜ್ಯದ ಎಲ್ಲ ಭಾಗಗಳಲ್ಲೂ ಸರ್ವೆ ಕೆಲಸವನ್ನು ಪ್ರಾರಂಭ ಮಾಡಿ ದ್ದಾರೆ. ರೈತರ ಮನೆಯ ತುಳಸಿ ಕಟ್ಟೆಗೆ ಒಂದು ಕಲ್ಲು, ಹಿತ್ತಲಿಗೆ ಒಂದು ಕಲ್ಲು ಮನೆ ಮಧ್ಯದಲ್ಲಿ ಒಂದು ಕಲ್ಲು, – ಈ ರೀತಿಯಾಗಿ ಕಲ್ಲುಗಳು ಬಿದ್ದಿವೆ. ಆ ಜಾಗವನ್ನೆಲ್ಲ ಅವರು ತೆಗೆದುಕೊಳ್ಳುತ್ತಾರೋ ಏನೋ ಎಂದು ಗಾಬರಿಯಾಗಿದೆ. ಇದರ ಬಗ್ಗೆ ತಾವು ಹೇಳಬೇಕು. ಇಲಾಖೆಯವರು ಹೇಳಿದ್ದಾರೆಂದು ಸುಮ್ಮನೇ ಏನೊ ಸರ್ವೆ ಮಾಡುತ್ತಾರೆಂದರೆ ತಾಪತ್ರಯ ಇಲ್ಲ. ಆದರೆ ಮನೆ ಜಾಗವನ್ನು ಅರಣ್ಯ ಇಲಾಖೆಯವರು ತೆಗೆದುಕೊಳ್ಳುವುದಾದರೆ ರೈತರ ಗತಿ ಏನು? ಇದನ್ನು ತಾವು ನೋಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತು ಮಲೆನಾಡಿದಲ್ಲಿ ಅನೇಕ ತಾಲ್ಲೂಕುಗಳು ವಿದ್ಯುಚ್ಛಕ್ತಿ ಯೋಜನೆಗಳಿಗೆ ಸೇರಿವೆ, ಅದರಲ್ಲಿ ನಮ್ಮ ತಾಲ್ಲೂಕು ಸೇರಿದೆ. ಈ ದಿಸೆಯಲ್ಲಿ, ವಿದ್ಯುಚ್ಛಕ್ತಿ ಇಲಾಖೆಯವರಿಗೂ ನಿಮಗೂ ವಾದ–ವಿವಾದ ಶುರುವಾಗಿದೆ. ಅರಣ್ಯ ಪ್ರದೇಶ ನಾಶವಾಗಬಾರದೆಂಬುದನ್ನು ಒಪ್ಪಿದ್ದಾರೆ. ಆದರೆ ನೀವು ಲೈನ್ ಹಾಕಬೇಕೆಂದ ಜಾಗದಲ್ಲಿ ಅವರು ಹಾಕುವುದಕ್ಕೆ ಒಪ್ಪುವುದಿಲ್ಲ. ಅತ್ಯಂತ ಕಡಿಮೆ ಜಾಗದಲ್ಲಿ ವಿದ್ಯುಚ್ಛಕ್ತಿ ಲೈನ್ ಎಳೆಯುವುದಕ್ಕೆ ಅವಕಾಶ ಕೊಡುತ್ತಾ ಹೋದರೆ ಅನೇಕ ಸ್ಥಳಗಳಲ್ಲಿ ಲೈನನ್ನು ಎಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ದಯವಿಟ್ಟು ತಾವು ಇದನ್ನು ಪರಾಂಬರಿಸ ಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ವನ್ಯ ಮೃಗಗಳನ್ನು ರಕ್ಷಣೆ ಮಾಡಿ, ಬೇಡ ಎಂದು ಹೇಳುವುದಿಲ್ಲ. ಜೊತೆಗೆ, ಮನುಷ್ಯರನ್ನು ರಕ್ಷಣೆ ಮಾಡುವ ಜವಾಬ್ದಾರಿ ಇದೆ ತಾನೆ? ನಾವು ಕೋವಿ ಹಿಡಿದು ಹೊಡೆಯುವ ಹಾಗೆ ಇಲ್ಲ. ಮಲೆನಾಡಿನಲ್ಲಿ ಹುಲಿ, ಚಿರತೆ, ಕರಡಿ, ಆನೆಗಳ ಹಾವಳಿ ವಿಪರೀತ ವಾಗಿದೆ.

ಅಧ್ಯಕ್ಷರು.— ದೇಶದಲ್ಲಿ ಹುಲಿ, ಚಿರತೆಯ ಸಂತತಿ ಎಲ್ಲ ನಶಿಸಿ ಹೋಗುತ್ತಿದೆ ಎಂದು ಹೇಳುತ್ತಿದ್ದರೆ ನೀವು ಅವುಗಳಿಂದ ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.— ಚಿರತೆ ಅಲ್ಲ ಹುಲಿ, ಅದು ನಮ್ಮಲ್ಲಿದೆ.

ಶ್ರೀ ಬಿ. ಬಿ. ಕಕ್ಕಿಲಾಯ.— ಹುಲಿಗಳು ಕಾಡಿನಲ್ಲಿರುತ್ತವೆ ಎಂದು ಕೇಳಿದ್ದೇನೆ. ಆದರೆ ಮನೆಯೊಳಗೆ ಹುಲಿಗಳು ಇರುತ್ತವೆ ಎಂದು ಮೊನ್ನೆ ಪತ್ರಿಕೆಯಲ್ಲಿ ಬಂದದ್ದನ್ನು ಓದಿದ್ದೇನೆ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್— ಅರಣ್ಯ ಪ್ರದೇಶಗಳನ್ನು ನೀವು ವನ್ಯ ಮೃಗ ಸಂರಕ್ಷಣೆಯ ಯೋಜನೆಗೆ ಸೇರಿಕೊಂಡಿದ್ದೀರಿ. ಆದರೆ, ರೈತರು ಅರಣ್ಯ ಪ್ರದೇಶಗಳ ಪಕ್ಕದಲ್ಲೇ ಮನೆ ಜಮೀನುಗಳನ್ನು ಮಾಡಿಕೊಂಡಿದ್ದಾರೆ. ಅಂಥ ಕಡೆ ಏಕಾಏಕಿ ಆನೆ ಬಂದು ಭತ್ತದ ಗದ್ದೆಯಲ್ಲಿ ನಿಂತರೆ ಅವರ ಗತಿ ಏನು?

ನಿಮ್ಮ ಇಲಾಖೆಯವರು ರೈತರ ರಕ್ಷಣೆಗೆ ಬರುತ್ತಿಲ್ಲ, ಹೀಗಾದರೆ ರೈತರು ಬದುಕುವುದಾದರೂ ಹೇಗೆ? ಅದಕ್ಕೆ ನಾನೊಂದು ಸಲಹೆಯನ್ನು ಕೊಟ್ಟಿದ್ದೇನೆ. ಏನೆಂದರೆ ಆನೆ ಬರುವಂಥಾ ಕಡೆಗಳಲ್ಲಿ ಟ್ರೆಂಚ್‌ಸ್‌ನ್ನು ತೋಡಿಸಿ ಕೊಡಿ, ಇಲ್ಲದೇ ಹೋದರೆ ರೈತರ ಪ್ರಾಣ ಉಳಿಯುವುದಿಲ್ಲವೆಂದು ಹೇಳಿದ್ದೇನೆ. ಸುಮಾರು ೪ ವರ್ಷಗಳ ಹಿಂದೆ ೩ ಜನ ರಾತ್ರಿ ಆನೆ ಕಾಲಿಗೆ ಸಿಕ್ಕಿ ಸತ್ತು ಹೋದರು. ಆ ಸಂದರ್ಭದಲ್ಲಿ ನಾನೊಂದು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡು ಬಂದಾಗ ಆಗಿನ ಅರಣ್ಯ ಮಂತ್ರಿಗಳವರು ಪರಿಹಾರ ಕೊಡುತ್ತೇನೆಂದು ಹೇಳಿದ್ದರು. ಆದರೆ ಯಾವುದೇ ತರಹದ ಸೌಲತ್ತು ಕೂಡ ಇಲ್ಲಿಯವರೆಗೆ ಅವರಿಗೆ ಸಿಕ್ಕಿಲ್ಲ. ಆದುದರಿಂದ ನಿಮ್ಮ ಅರಣ್ಯ ಇಲಾಖೆಯವರು ರೈತರ ಸಂರಕ್ಷಣೆ ಮಾಡದಿದ್ದರೆ ಹೇಗೆ? ಇನ್ನು ರೈತ ವರ್ಷವೆಲ್ಲಾ ಕಷ್ಟಪಟ್ಟು ಬೆಳೆದಿದ್ದಂಥ ಬೆಳೆಯನ್ನು ಆನೆ ಬಂದು ರಾತ್ರೋರಾತ್ರಿ ಎಲ್ಲಾ ತುಳಿದು ಹಾಳು ಮಾಡಿದರೆ ಅವನ ಸಂಸಾರದ ಗತಿ ಏನು? ಅವನು ಜೀವನ ಹೇಗೆ ಸಾಗಿಸಬೇಕು? ಅದಕ್ಕೆ ನಮ್ಮ ಪ್ರಾಣ ಸಂರಕ್ಷಣೆ ಮಾಡಿಕೊಳ್ಳಲು ಎಲ್ಲರಿಗೂ ಕೋವಿ ಕೊಡಿ ಎಂದು ನಾನು ಹೇಳುವುದಿಲ್ಲ. ಬಯಲು ಸೀಮೆಗೂ ಅರಣ್ಯ ಪ್ರದೇಶದಲ್ಲಿರತಕ್ಕವರಿಗೂ ವ್ಯತ್ಯಾಸವಿದೆ. ನಾವು ದಿನ ಬೆಳಗಾದರೆ ಆನೆ ಹುಲಿಗಳ ಸಂದರ್ಶನ ಮಾಡುತ್ತಿರುತ್ತೇವೆ. ಅವುಗಳಿಂದ ನಮಗೆ ರಕ್ಷಣೆ ಕೊಡದೇ ಹೋದರೆ ಏನು ಮಾಡಬೇಕು. ನಮ್ಮನ್ನು ನಾವು ರಕ್ಷಣಾ ಮಾಡಿಕೊಳ್ಳಲು ಕೋವಿ-ರೈಫಲನ್ನು ನಾವೇ ಇಟ್ಟುಕೊಳ್ಳಬೇಕಾಗುತ್ತದೆ. ನಾವು ಇಲ್ಲಿ ಗಮನ ಸೆಳೆಯುವ ಸೂಚನೆ ತಂದಾಗ ಆನೆಗಳನ್ನು ಹಿಡಿಯಲು ಅಧಿಕಾರಿಗಳನ್ನು ಕಳುಹಿಸಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಅವರು ಅಲ್ಲಿಗೆ ಹೋಗಿ ೮ ದಿವಸಗಳ ಕಾಲ ಇದ್ದು ಟಿ.ಎ.ಡಿ.ಎ. ತೆಗೆದುಕೊಳ್ಳುತ್ತಾರೆ. ಅಷ್ಟೇ ಹೊರತು ನಿಜವಾಗಿಯೂ ಆನೆಗಳಿಂದ ಆಗುತ್ತಿರುವ ತೊಂದರೆಯನ್ನು ಅವರು ತಪ್ಪಿಸುತ್ತಿಲ್ಲ. ಆದುದರಿಂದ ರೈತರಿಗೆ ರಕ್ಷಣೆ ಕೊಡುವ ಬಗ್ಗೆ ತಾವು ಹೆಚ್ಚಿನ ಗಮನ ನೀಡಬೇಕೆಂದು ತಿಳಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ)—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಮಂಡಿಸಿರತಕ್ಕ ಅರಣ್ಯ ಮತ್ತು ಕಾರ್ಮಿಕ ಹಾಗೂ ಖನಿಜ ಇಲಾಖೆಗಳನ್ನು ಕುರಿತು ೪ ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅರಣ್ಯ ಮತ್ತು ಕಾರ್ಮಿಕ ಶಾಖೆಯನ್ನು ಕುರಿತು ಬಹಳಷ್ಟು ಜನ ಮಾತನಾಡಿದ್ದಾರೆ. ಆದುದರಿಂದ ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ದೇಶದ ಪ್ರಮುಖ ಸಂಪತ್ತು ಹಾಗೂ ರಾಷ್ಟ್ರದ ಸಂಪತ್ತು ಖನಿಜ ಸಂಪತ್ತು. ಈ ಖನಿಜ ಸಂಪತ್ತಿನ ಬಗ್ಗೆ ನಾವು ಸಾಕಷ್ಟು ಗಮನವನ್ನು ಹರಿಸಿಲ್ಲ. ಈ ಇಲಾಖೆ ಯಾವ ರೀತಿಯಾಗಿ ಕೆಲಸ ಮಾಡಬೇಕಾಗಿತ್ತೋ ಆ ರೀತಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಪ್ರಸ್ತಾಪ ಮಾಡಿ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಖನಿಜ ಸಂಪತ್ತಿನ ಬಗ್ಗೆ ತಜ್ಞರು ಒಂದು ಮಾತನ್ನು ಹೇಳಿದ್ದಾರೆ. ಭಾರತ ದೇಶದಲ್ಲಿ ೫ ಲಕ್ಷ ವರ್ಷಗಳ ಹಿಂದೆ ಮನುಷ್ಯ ಈ ಖನಿಜವನ್ನು ಉಪಯೋಗ ಮಾಡಿಕೊಂಡ ಉದಾಹರಣೆಗಳು ಸಿಗುತ್ತವೆ. ಮಾನವನ ನಾಗರೀಕತೆಗೆ ಆಧಾರವಾಗಿರತಕ್ಕಂಥ, ಮಾನವನ ಆರ್ಥಿಕಾಭಿವೃದ್ಧಿಗೆ ಕಾರಣವಾಗಿರತಕ್ಕಂಥ ಈ ಖನಿಜ ಸಂಪತ್ತಿನ ಬಗ್ಗೆ ತಾವು ಯಾವ ರೀತಿಯಾಗಿ ಗಮನ ಕೊಟ್ಟಿದ್ದೀರಿ ಎನ್ನುವ ಬಗ್ಗೆ ವಿಚಾರ ಮಾಡಿದರೆ, ಕರ್ನಾಟಕದಲ್ಲಿರತಕ್ಕ ಖನಿಜ ಸಂಪತ್ತಿನಿಂದ ಒಂದು ವರ್ಷಕ್ಕೆ ಎಷ್ಟು ಉತ್ಪನ್ನ, ಎಷ್ಟು ಆದಾಯ ಬರುತ್ತದೆ ಎನ್ನುವುದರ ಬಗ್ಗೆ ತಜ್ಞರು ವರದಿಯನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ೨,೩ ಸಾವಿರ ಕೆ.ಜಿ. ಚಿನ್ನವನ್ನು ಉತ್ಪನ್ನ ಮಾಡುತ್ತಿದ್ದೇವೆ ಅದರ ಬೆಲೆ ೮೦

ಮಿಲಿಯನ್ ರೂಪಾಯಿಗಳಷ್ಟು. ಇಷ್ಟು ಖನಿಜ ಸಂಪತ್ತು ಇದೆ. ಇದು ಇಡೀ ಭಾರತದೇಶದಲ್ಲಿಯೇ ಚಿನ್ನವನ್ನು ಉತ್ಪತ್ತಿ ಮಾಡುವ ಒಂದೇ ಒಂದು ರಾಜ್ಯವಾಗಿದೆ. ಯಾವ ರಾಜ್ಯದಲ್ಲೂ ಸಹ ಚಿನ್ನವನ್ನು ಉತ್ಪನ್ನ ಮಾಡುತ್ತಿಲ್ಲ. ಅಂಥ ಚಿನ್ನದ ನಾಡು ನಮ್ಮದು. ಮತ್ತೆ ಒಂದು ವರ್ಷಕ್ಕೆ ೮೭ ಸಾವಿರ ಟನ್ ತಾಮ್ರವನ್ನು ಉತ್ಪನ್ನ ಮಾಡುತಿ ದ್ದೇವೆ, ಅದರ ಬೆಲೆ ೧೦೦ ಮಿಲಿಯನ್ ರೂಪಾಯಿಗಳು. ಇದು ಭಾರತದಲ್ಲಿಯೇ ೩ನೇ ರಾಜ್ಯವಾಗಿದೆ. ಮತ್ತೆ ಕಬ್ಬಿಣದ ಅದಿರು ವರ್ಷಕ್ಕೆ ೪ ಮಿಲಿಯನ್ ಟನ್ ಉತ್ಪನ್ನ ಮಾಡುತ್ತಿದ್ದೇವೆ, ಅದರ ಬೆಲೆ ೯೦ ಮಿಲಿಯನ್ ರೂಪಾಯಿಗಳು. ಇದು ಭಾರತದಲ್ಲಿ ೪ನೇ ರಾಜ್ಯವಾಗಿದೆ. ಇನ್ನು ಮ್ಯಾಂಗನೀಸ್ ವರ್ಷಕ್ಕೆ ೪೬ ಲಕ್ಷ ಟನ್ ಉತ್ಪನ್ನವಾಗುತ್ತದೆ. ಇದರ ಬೆಲೆ ೨೦ ಮಿಲಿಯನ್ ಟನ್. ಇದಕ್ಕೆ ಭಾರತದಲ್ಲಿಯೇ ನಮ್ಮ ಕರ್ನಾಟಕ ಎರಡನೇ ರಾಜ್ಯವಾಗಿದೆ. ಇನ್ನು ಕ್ರೊಮೈಟ್ ೮ ಸಾವಿರ ಟನ್ ಉತ್ಪನ್ನವಾದರೆ ಅದರ ಬೆಲೆ ೧೪ ಲಕ್ಷ ರೂಪಾಯಿಗಳು. ಇಷ್ಟು ಉತ್ಪನ್ನವಿರತಕ್ಕಂಥ ಖನಿಜ ಸಂಪತ್ತು, ನಿಸರ್ಗ ಸಂಪತ್ತು ನಮ್ಮಲ್ಲಿ ಇದೆ. ಇಷ್ಟೊಂದು ಸಂಪತ್ತು ಇರುವುದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಬಗ್ಗೆ ನಿಮ್ಮ ಇಲಾಖೆಯವರು ಕೆಲಸ ಮಾಡಿಲ್ಲ. ಆದುದರಿಂದ ಈ ಒಂದು ಸಂಪತ್ತನ್ನು ಸರಿಯಾಗಿ ಬಳಸಿಕೊಳ್ಳುವ ಬಗ್ಗೆ ಹೆಚ್ಚಿಗೆ ಮುತುವರ್ಜಿಯನ್ನು ನಿಮ್ಮ ಇಲಾಖೆಯವರು ವಹಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ೧ ಕೋಟಿ ರೂಪಾಯಿಗಳು ಮಂಜೂರು ಆಗಿತ್ತು ಆದರೆ ಕೊನೆಗೆ ಯಾವ ಕಾರಣಕ್ಕೋ ಖರ್ಚು ಆದದ್ದು ೪೦ ಲಕ್ಷ ರೂಪಾಯಿಗಳು ಮಾತ್ರ. ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಅಂದರೆ ಈ ಇಲಾಖೆಯ ಬಗ್ಗೆ ಸರ್ಕಾರ ಎಷ್ಟು ತಾತ್ಸಾರ ಮನೋಭಾವನೆಯನ್ನು ಹೊಂದಿದೆ ಎಂಬುದನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಇನ್ನು ಖನಿಜ ಸಂಪತ್ತು ಎಲ್ಲೆಲ್ಲಿದೆ ಎಂದು ಪತ್ತೆ ಮಾಡಿದುದರಲ್ಲಿ ೭೧೫ ಕಿ.ಮೀ.ನಲ್ಲಿ ಮ್ಯಾಂಗನೀಸ್ ಅದಿರು ಇದೆಯೆಂದು ತನಿಖೆ ಮಾಡಿದ್ದಾರೆ ಲೈಮ್ ಸ್ಟೋನ್ ಒಂದು ತಾಲ್ಲೂಕ್‌ನಲ್ಲಿದೆಯೆಂದು ಪತ್ತೆ ಮಾಡಿದ್ದಾರೆ, ಅಲ್ಯೂಮಿನಿಯಂ ಸಲ್ಫೈಡ್‌ನ ಬಗ್ಗೆ ತನಿಖೆ ಮಾಡಿದ್ದಾರೆ. ಆದರೆ ಅದರ ಪರಿಣಾಮವೇನಾಯಿತು ? ಎಲ್ಲೆಲ್ಲಿ ಎಷ್ಟೆಷ್ಟು ಸಿಕ್ಕಿತು ಎನ್ನುವ ಬಗ್ಗೆ ವರದಿಯನ್ನು ಕೊಟ್ಟಿಲ್ಲ. ಆಮೇಲೆ ಈಗ ಚಿನ್ನದ ಬಗ್ಗೆ ನಾನು ಹೇಳುತ್ತಿದ್ದೆ. ನಮ್ಮದು ಒಂದೇ ಒಂದು ರಾಜ್ಯ ಇಡೀ ರಾಷ್ಟ್ರದಲ್ಲಿ ಚಿನ್ನವನ್ನು ಉತ್ಪತ್ತಿ ಮಾಡುತ್ತಿರುವುದು ಎನ್ನುವ ಬಗ್ಗೆ ವಿವರ ಕೊಟ್ಟು ಹೇಳಿದ್ದೇನೆ. ೨೪೧೧ ಕೆ.ಜಿ.ಯಷ್ಟು ಚಿನ್ನ ಉತ್ಪತ್ತಿಯಾಗುತ್ತಿದ್ದರೂ ಸಹ ಕೋಲಾರದ ಚಿನ್ನದ ಗಣಿ ನಮ್ಮ ರಾಜ್ಯದ ಕೈಯಲ್ಲಿ ಇಲ್ಲ. ಪಿ.ಎ.ಸಿ. ಕೇಂದ್ರದವರು ತಮ್ಮ ವರದಿಯಲ್ಲಿ ಇದರ ವ್ಯವಹಾರದ ಬಗ್ಗೆ ವಿವರವನ್ನು ಕೊಟ್ಟಿದ್ದಾರೆ. ೧೯೭೪-೭೫ರಲ್ಲಿ ೧೮೫ ಕೋಟಿ ರೂಪಾಯಿಗಳ ನಷ್ಟ, ೧೯೭೫-೭೬ರಲ್ಲಿ ೨೫೦ ಕೋಟಿ ರೂಪಾಯಿಗಳ ನಷ್ಟ, ೧೯೭೬-೭೭ರಲ್ಲಿ ೧೫೪ ಕೋಟಿ ರೂಪಾಯಿಗಳ ನಷ್ಟವಾಗಿದೆ ಎನ್ನುವುದನ್ನು ಕೊಟ್ಟಿದ್ದಾರೆ. ೧:೮ ದಾಮಾಷಾ ಉತ್ಪನ್ನ ಮಾಡತಕ್ಕ ಈ ರಾಜ್ಯದಲ್ಲಿ ಇಷ್ಟೊಂದು ನಷ್ಟವನ್ನು ಅನುಭವಿಸುತ್ತಿದ್ದೇವೆ. ನಮಗೂ ಅದಕ್ಕೂ ಸಂಬಂಧವಿಲ್ಲ. ಏತಕ್ಕೆ ಈ ಮಾತನ್ನು ನಾನು ಪ್ರಸ್ತಾಪ ಮಾಡಿ ಹೇಳಿದೆ ಎಂದರೆ, ನಾವು ಹಳೇ ಕಂದಾಚಾರದ ಪದ್ಧತಿಯನ್ನು ಅನುಸರಿಸಿ ಅದಿರುಗಳನ್ನು ತೆಗೆಯುತ್ತಿದ್ದೇವೆ. ಅದನ್ನು ಇನ್ನೂ ಬದಲಾವಣೆ ಮಾಡಿಲ್ಲ. ವೈಜ್ಞಾನಿಕವಾಗಿ ಅದಿರುಗಳನ್ನು ತೆಗೆಯಲಿಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ರೂಪಿಸಿಕೊಂಡಿಲ್ಲ ಎನ್ನತಕ್ಕದ್ದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮಲ್ಲಿ ಉತ್ಪನ್ನವಾಗತಕ್ಕ ವಸ್ತುಗಳ ಬಗ್ಗೆ ಸರ್ಕಾರಕ್ಕೆ ಎಷ್ಟು ಉಪಯೋಗವಾಗುತ್ತಿದೆ, ಸಾರ್ವಜನಿಕರಿಗೆ ಎಷ್ಟು ಉಪಯೋಗವಾಗುತ್ತಿದೆ ಎಂಬುದರ ಕಡೆಗೆ ನಿಮ್ಮ ಗಮನ ಸೆಳೆಯುವುದು ಅಗತ್ಯವಿದೆ. ನಮ್ಮಲ್ಲಿ ಉತ್ಪನ್ನ ಆಗತಕ್ಕದ್ದು ಸುಮಾರು ೨೦ ಅದಿರುಗಳು. ತಾಮ್ರದ ಅದಿರು ೪,೯೭೫ ಟನ್, ಕಬ್ಬಿಣ ೩೬ ಲಕ್ಷ, ಮ್ಯಾಂಗನೀಸ್ ೪ ಸಾವಿರದ ೩೬ ಟನ್, ಪ್ರಮುಖ ಖನಿಜಗಳು ೨೦. ಅದರಲ್ಲಿ ಕಬ್ಬಿಣದ ಅದಿರಿನ ಉತ್ಪನ್ನ ಎಷ್ಟೆಂದರೆ ೭,೫೭,೬೪,೦೦೦. ಒಟ್ಟು ೪ ಪ್ರಮುಖ ಅದಿರುಗಳಿಂದ ಉತ್ಪನ್ನ ಎಷ್ಟೆಂದರೆ ೪೨,೩೯,೬೦೭ ಟನ್‌ಗಳು. ಇದರ ಬೆಲೆ ೧೨,೧೬,೩೦ ೧೫೧ ರೂಪಾಯಿ. ಇಷ್ಟಿದ್ದರೂ ನಮಗೆ ಬರತಕ್ಕ ಆದಾಯ ೪,೬೨,೮೦,೭೯೫ ರೂಪಾಯಿ. ೪ ಕೋಟಿ ರೂಪಾಯಿ ಉತ್ಪನ್ನ ಪಡೆಯುವುದಕ್ಕೆ ಇಲಾಖೆ ಖರ್ಚು ಮಾಡತಕ್ಕದ್ದು ೧.೪೮ ಕೋಟಿ ರೂಪಾಯಿ. ೪ ಕೋಟಿ ರೂಪಾಯಿಗಳಲ್ಲಿ ಎರಡೂವರೆ ಕೋಟಿ ರೂಪಾಯಿಗಳೂ ಸಹ ಉಳಿಯುವುದಿಲ್ಲ ಕೋಟ್ಯಾಂತರ ರೂಪಾಯಿ ಆದಾಯ ಬಂದರೂ ಅದನ್ನು ಸರಿಯಾಗಿ ಉಪಯೋಗ ಮಾಡುವ ಪ್ರಯತ್ನ ನಮ್ಮಲ್ಲಿ ನಡೆದಿಲ್ಲ ಎಂಬುದಕ್ಕೆ ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರವೇ ಸಾಕ್ಷಿಯಾಗಿದೆ. ನಮ್ಮಲ್ಲಿರತಕ್ಕ ಖನಿಜ ಸಂಪತ್ತನ್ನು ಇಲ್ಲಿಯೇ ಉಪಯೋಗ

ಮಾಡಿಕೊಂಡಿದ್ದರೆ ಅದರಿಂದ ಲಕ್ಷಾಂತರ ಜನರಿಗೆ ಉದ್ಯೋಗ ಸಿಗುತ್ತಿತ್ತು. ಇವತ್ತು ಆ ಖನಿಜವೆಲ್ಲ ಹೊರಗಡೆ ಹೋಗುತ್ತಿದೆ. ಅದರಿಂದ ಆಗತಕ್ಕ ನಷ್ಟ ಕೋಟ್ಯಾಂತರ ರೂಪಾಯಿ. ಇದರ ಜೊತೆಗೆ ಇಲ್ಲಿ ಕೆಲವು ಜನ ಪ್ರಭಾವಶಾಲಿಗಳು ಈ ಅದಿರನ್ನು ಜಪಾನಿಗೆ ಕಳುಹಿಸುವುದಕ್ಕೆ ನಿಮ್ಮಿಂದಲೇ ಲೈಸೆನ್ಸ್ ಪಡೆದಿದ್ದಾರೆ. ಬಳ್ಳಾರಿ ಜಿಲ್ಲೆ ಒಂದರಲ್ಲೇ ೨೦೦ ಜನರಿಗೆ ಲೈಸೆನ್ಸ್ ಕೊಟ್ಟಿದ್ದೀರಿ ಆ ಅದಿರನ್ನು ಸಾಗಿಸುವುದಕ್ಕೆ ಲೈಸೆನ್ಸ್ ಕೊಟ್ಟಿದ್ದರ ಪರಿಣಾಮವಾಗಿ ಶೇಕಡ ೧೦ರಷ್ಟು ಬೆಲೆ ನಮಗೆ ಸಿಕ್ಕಿದರೆ ಹೊರ ದೇಶಕ್ಕೆ ಶೇಕಡ ೯೦ರಷ್ಟು ಹೋಗುತ್ತದೆ. ಅವರು ಬಹಳಷ್ಟು ದುರ್ಲಾಭ ಪಡೆಯುತ್ತಿದ್ದಾರೆ. ತತ್ಪರಿಣಾಮವಾಗಿ ನಮ್ಮಲ್ಲಿ ಆಗಬೇಕಾಗಿದ್ದ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಇದಕ್ಕೆ ಕೆಲವು ಪ್ರಭಾವಶಾಲಿ ಕಂಪನಿಗಳಿವೆ. ಅವು ಇವತ್ತಿನ ದಿವಸ ಕೇಂದ್ರದ ಮೇಲೆ ಪ್ರಭಾವ ಬೀರಿ ಕರ್ನಾಟಕ ರಾಜ್ಯದಲ್ಲಿ ಆಗಬೇಕಾಗಿದ್ದ ಉಕ್ಕಿನ ಕಾರ್ಖಾನೆಯನ್ನು ತಡೆಗಟ್ಟಿರುವುದನ್ನು ನೋಡುತ್ತಿದ್ದೇವೆ. ನಮ್ಮ ರಾಜ್ಯದಿಂದ ಹೊರಗಡೆ ಹೋಗತಕ್ಕ ಖನಿಜದ ಅಂದಾಜನ್ನು ತೆಗೆದುಕೊಂಡರೆ ಬಳ್ಳಾರಿ ಜಿಲ್ಲೆ ಒಂದರಲ್ಲೇ ೧೯೫೨ರಲ್ಲಿ ೧೦ ಸಾವಿರ ಟನ್ ಕಬ್ಬಿಣದ ಅದಿರನ್ನು ಸಾಗಿಸುತ್ತಿದ್ದರೆ ಇವತ್ತು ೩.೫ ಮೆಟ್ರಿಕ್ ಟನ್ ಅನ್ನು ಒಂದು ವರ್ಷಕ್ಕೆ ಸಾಗಿಸುತ್ತಿದ್ದಾರೆ. ಅಂದಾಗ ಇದುವರೆಗೆ ಎಷ್ಟು ಬಿಲಿಯನ್ ಟನ್ ಹೋಗಿದೆ ಮತ್ತು ಅಷ್ಟು ಅದಿರು ಇದ್ದಿದ್ದರೆ ನಮ್ಮ ರಾಜ್ಯದ ಸಂಪತ್ತು ಎಷ್ಟರಮಟ್ಟಿಗೆ ಅಭಿವೃದ್ಧಿಯಾಗುತ್ತಿತ್ತು ಎಂಬುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ, ಕಬ್ಬಿಣ ಎಲ್ಲ ಸಾಧನ ಸಲಕರಣೆಗಳಿಗೂ ಬೇಕಾಗುತ್ತದೆ. ವ್ಯವಸಾಯ, ಕೈಗಾರಿಕೆ ಹೀಗೆ ಬಹುಪಾಲು ಎಲ್ಲ ರಂಗಗಳಲ್ಲೂ ಇದರ ಉಪಯೋಗ ಮಾಡುತ್ತಾರೆ. ಇನ್ನೂ ಒಂದು ಮಾತು ಹೇಳುವುದಾದರೆ, ಕಬ್ಬಿಣ ಮನುಷ್ಯ ಜೀವನದ ನಿತ್ಯೋಪಯೋಗದ ವಸ್ತು. ಆದರೆ ನಮ್ಮ ರಾಜ್ಯದಿಂದ ಎಷ್ಟೋ ಕೋಟಿ ರೂಪಾಯಿಗಳ ಅದಿರು ಹೊರಗಡೆ ಹೋಗಿ ನಾವು ನಷ್ಟವನ್ನು ಅನುಭವಿಸತಕ್ಕ ಪರಿಸ್ಥಿತಿಗೆ ಕಾರಣವಾಗಿದೆ. ಈ ಬಗ್ಗೆ ಸರ್ಕಾರದವರು ತೀವ್ರ ಗಮನ ಕೊಡಬೇಕಾಗಿತ್ತು; ಮತ್ತು ಬರಬೇಕಾದ ಉತ್ಪನ್ನವನ್ನು ಅಧಿಕಗೊಳಿಸಬೇಕಾಗಿತ್ತು. ಆದರೆ ಈ ದಿಸೆಯಲ್ಲಿ ಪ್ರಯತ್ನ ನಡೆದಿಲ್ಲ; ಇದನ್ನು ತಾವು ನೋಡಬೇಕಾಗಿದೆ. ಅದೇ ರೀತಿ, ನಮ್ಮಲ್ಲಿ ಬಹಳ ಅಮೂಲ್ಯವಾದ ಕಲ್ಲುಗಳು ಏನಿವೆ ಅವುಗಳ ಸಾಗಾಣಿಕೆಯಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಉದಾಹರಣೆಗೆ, ಮೈನಿಂಗ್ಸ್ ಕ್ರೋಮೈಟ್ಸ್ ಇತ್ಯಾದಿಗಳು ಇರಬಹುದು. ಹತ್ತು ಎಕರೆಯಲ್ಲಿ ಮೈನಿಂಗ್ ತೆಗೆಯಿರಿ ಎಂದು ಲೈಸೆನ್ಸ್ ಕೊಟ್ಟಿದ್ದರೆ ಅದು ನೂರು ಎಕರೆಯಲ್ಲಿ ತೆಗೆಯಲ್ಪಟ್ಟಿರುತ್ತದೆ. ಅದಕ್ಕೆ ಒಂದು ನಿಗದಿ ಇರುತ್ತದೆ; ಇಷ್ಟೇ ಅಡಿಯಲ್ಲಿ ಇರತಕ್ಕ ಲೋಹವನ್ನು ತೆಗೆಯಬೇಕೆಂದು ಹೇಳಿರುತ್ತಾರೆ. ಆದರೆ ಮೈನಿಂಗ್ ಏಜೆಂಟ್ಸ್ ಏನಿರುತ್ತಾರೆ ಅವರು ಅದರ ಹತ್ತರಷ್ಟು ಲಾಭ ಪಡೆಯುತ್ತಾರೆ, ಜೊತೆಗೆ ಅಧಿಕಾರಿಗಳೂ ಕೂಡ ಶಾಮೀಲಾಗಿರುತ್ತಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಭ್ರಷ್ಟಾಚಾರ ಮಾಡಿ ಲೋಹದಲ್ಲಿ ನಷ್ಟ ಉಂಟು ಮಾಡತಕ್ಕ ಸಂದರ್ಭಗಳನ್ನು ಕುರಿತು ಅನೇಕ ಜನ ಕೋರ್ಟಿಗೆ ದೂರು ಕೊಟ್ಟಿದ್ದಾರೆ. ಆದರೂ ಸಹ ಆ ಬಗ್ಗೆ ಸಾಕಷ್ಟು ತನಿಖೆಯಾಗುತ್ತಿಲ್ಲ. ಲೈಸೆನ್ಸ್ ಕೊಟ್ಟಿರುವುದರ ಮೇಲೆ ಅಪೀಲು ಹೋಗುವ ಅಧಿಕಾರ ಕೇಂದ್ರಕ್ಕೆ ಇದ್ದರೂ ಅದರ ಮೇಲೆ ಪ್ರಭಾವ ಬೀರುತ್ತಾರೆ. ಹೀಗಾಗಿ, ನಮ್ಮ ಸಂಪತ್ತೆಲ್ಲ ಹೊರಗಡೆ ಹೋಗುತ್ತಿದೆ. ಈ ರೀತಿ ಆಗಬಾರದೆಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯಲ್ಲಿ ಇಂಥ ಅನೇಕ ಲೋಪಗಳು ಆಗಿವೆ ಎಂಬುದನ್ನು ಕುರಿತು ಅನೇಕ ವರದಿಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ. ಅದನ್ನೆಲ್ಲ ಈ ಸಂದರ್ಭದಲ್ಲಿ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೊಂದು ಪ್ರಮುಖವಾದ ಅಂಶವೇನೆಂದರೆ, ಗ್ರೌಂಡ್ ವಾಟರ್ ವಿಚಾರ. ತಜ್ಞರ ಅಭಿಪ್ರಾಯದಂತೆ ನಮ್ಮಲ್ಲಿ ಶೇಕಡ ೯೮ರಷ್ಟು ಗ್ರೌಂಡ್ ವಾಟರ್ ಇದೆ; ಶೇಕಡ ೨ರಷ್ಟು ಮಾತ್ರ ಸರ್ಪ್ಲಸ್ ವಾಟರ್ ಇದೆ. ನಾವು ಬರೀ ಮೇಲಿನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ತಾವು ಕೊಟ್ಟಿರತಕ್ಕ ವರದಿಯಲ್ಲಿ, ನಮ್ಮ ರಾಜ್ಯದಲ್ಲಿ ಎಷ್ಟು ನೀರು ಸಿಗುತ್ತದೆ ಎಂಬುದನ್ನು ಹೇಳಿದ್ದೀರಿ. ಇವತ್ತು ನಮ್ಮಲ್ಲಿರತಕ್ಕದ್ದು ಕೇವಲ ೩,೫೧,೬೭೮ ಬಾವಿಗಳು ಈ ರಾಜ್ಯದಲ್ಲಿ ೬,೪೫,೫೧೫ ಬಾವಿಗಳನ್ನು ತೋಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದೀರಿ. ನಮ್ಮ ರಾಜ್ಯದಲ್ಲಿ ನೀರಿಗಾಗಿ ಹಗಲಿರುಳೂ ಪರಿತಪಿಸತಕ್ಕ ಅನೇಕ ಜಿಲ್ಲೆಗಳಿವೆ. ಬಳ್ಳಾರಿ ಜಿಲ್ಲೆಯಲ್ಲಿ ೨೨೮೬೨ ಬಾವಿಗಳನ್ನು ತೋಡಲು ಅವಕಾಶ ಇದೆ, ಬೀದರ್ ಜಿಲ್ಲೆಯಲ್ಲಿ ೨೪೧೬೭ ಬಾವಿಗಳಿಗೆ ಅವಕಾಶ ಇದೆ, ಬಿಜಾಪುರ ಜಿಲ್ಲೆಯಲ್ಲಿ ೪೨೦೪೫ ಬಾವಿಗಳನ್ನು ತೋಡಲು ಅವಕಾಶ

ಇದೆ, ಚಿತ್ರದುರ್ಗ ಜಿಲ್ಲೆಯಲ್ಲಿ ೨೧,೪೧೫ ಬಾವಿಗಳಿಗೆ ಅವಕಾಶ ಇದೆ, ದಾರವಾಢದಲ್ಲಿ ೬೨,೦೬೦ ಬಾವಿಗಳಿಗೂ, ಗುಲ್ಬರ್ಗದಲ್ಲಿ ೬೭,೦೧೦ ಬಾವಿಗಳನ್ನು ತೋಡಲು ಅವಕಾಶ ಇದೆ. ಆದರೂ ಕೂಡ ಆ ದಿಸೆಯಲ್ಲಿ ಏತಕ್ಕೆ ಪ್ರಯತ್ನ ಮಾಡಿಲ್ಲ? ಬಿಜಾಪುರ ಜಿಲ್ಲೆಯಲ್ಲಿ ಕ್ಷಾಮ ನಿವಾರಣೆಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಅಲ್ಲಿ ಬಾವಿಗಳನ್ನು ತೋಡಿಸಿಲ್ಲ. ಒಟ್ಟು ನಮ್ಮ ರಾಜ್ಯದಲ್ಲಿ ೬ ಲಕ್ಷ ಬಾವಿಗಳನ್ನು ತೋಡಲು ಅವಕಾಶ ಇದ್ದರೂ ಸಹ ಈ ದಿಸೆಯಲ್ಲಿ ಪ್ರಯತ್ನ ಮಾಡಿ ನಮ್ಮಲ್ಲಿರತಕ್ಕ ಅಂತರ್ಜಲವನ್ನು ಉಪಯೋಗ ಮಾಡಿಕೊಂಡು ನಮ್ಮ ದೇಶದ ಆರ್ಥಿಕ ಸಂಪತ್ತನ್ನು ಬೆಳೆಸುವಂಥ ಪ್ರಯತ್ನವನ್ನು ಈ ಇಲಾಖೆ ಮಾಡಿಲ್ಲ. ಇದನ್ನು ತಾವು ಪರಿಶೀಲನೆ ಮಾಡಬೇಕು.

ಶ್ರೀ ಜಿ ಮಾದೇಗೌಡ.—ಮಾಡಿದ್ದೇವಲ್ಲ.

ಶ್ರೀ ಹೆಚ್. ಗಂಗಾಧರನ್.—ಕೋಟ್ಯಾಂತರ ರೂಪಾಯಿಗಳ ಹಣವನ್ನು ಕ್ಷಾಮ ನಿವಾರಣೆಗಾಗಿ ಖರ್ಚು ಮಾಡಿದ್ದೀರಿ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಯಂತ್ರಗಳನ್ನು ತರಿಸಿದ್ದೀರಿ. ೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರಿಗ್ ಯಂತ್ರಗಳನ್ನು ತರಿಸಿದ್ದರೂ ಕೂಡ ಅವು ಏನು ಕೆಲಸ ಮಾಡಿವೆ ಎಂಬ ಬಗ್ಗೆ ವರದಿ ಇಲ್ಲ. ೧೯೭೩ರಲ್ಲಿ ರಾಜ್ಯದಲ್ಲಿ ಕ್ಷಾಮ ಬಂದಾಗ ಕ್ಷಾಮ ಪೀಡಿತ ಪ್ರದೇಶಗಳಿಗೆ ನೀರನ್ನೊದಗಿಸಲು ಅವುಗಳನ್ನು ತರಿಸಲಾಯಿತು. ಅಲ್ಲಿ ಕ್ಷಾಮ ಹೋಗಿ ಮಳೆ ಬಂದಮೇಲೆ ಅವು ಇಲ್ಲಿಗೆ ಬಂದವು. ೪ ರಿಗ್ ಯಂತ್ರಗಳಿಗೆ ೬೧.೮೧ ಲಕ್ಷ ರೂಪಾಯಿಗಳನ್ನು ಕೊಟ್ಟು ತರಿಸಿದ್ದೀರಿ. ಆದರೆ ಅವುಗಳಿಂದ ೨೦೦ ಬಾವಿಗಳನ್ನಾದರೂ ತೆಗೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ಎಷ್ಟೋ ಕಡೆ ನೀರು ದೊರೆಯುವ ಅವಕಾಶ ಇದ್ದರೂ ಅವುಗಳ ಉಪಯೋಗ ಮಾಡಿಕೊಂಡಿಲ್ಲ. ನಮ್ಮಲ್ಲಿರತಕ್ಕ ಯೋಜನೆ ಪ್ರಕಾರ ೧೨೦೦ ಕೋಟಿ ರೂಪಾಯಿಯ ನೀರಾವರಿ ಯೋಜನೆಯನ್ನು ಪೂರ್ಣ ಮಾಡಬೇಕಾಗಿದೆ. ಇಷ್ಟು ಹಣ ಖರ್ಚು ಮಾಡಿದರೂ ಕೂಡ ನಮ್ಮ ರಾಜ್ಯದಲ್ಲಿರತಕ್ಕ ಶೇಕಡ ೨೪ರಷ್ಟು ಭೂಮಿಗೆ ಮಾತ್ರ ನೀರಾವರಿಯಾಗುತ್ತದೆ ತಮಿಳ್ನಾಡಿನಲ್ಲಿ ೪೫ ಪರ್ಸೆಂಟ್, ಆಂಧ್ರದಲ್ಲಿ ೪೨ ಪರ್ಸೆಂಟ್ ಮತ್ತು ಮಹಾರಾಷ್ಟ್ರದಲ್ಲಿ ೩೨ ಪರ್ಸೆಂಟ್ ಭೂಮಿಯನ್ನು ನೀರಾವರಿ ಪ್ರದೇಶವನ್ನಾಗಿ ಮಾಡಿದ್ದಾರೆ. ನಾವು ಇಷ್ಟೆಲ್ಲ ಮಾಡಿದರೂ ಆಗತಕ್ಕದ್ದು ೨೪ ಪರ್ಸೆಂಟ್ ಮಾತ್ರ. ೬ ಲಕ್ಷ ಬಾವಿಗಳನ್ನು ತೋಡಿದರೆ ಎಷ್ಟೋ ಲಕ್ಷ ಎಕರೆಗೆ ನೀರನ್ನು ಒದಗಿಸುವುದಕ್ಕೆ ಆಗುತ್ತಿತ್ತು ಅನ್ನುವುದಾದರೆ ಬಾವಿ ತೋಡುವುದಕ್ಕೆ ಇಷ್ಟೊಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಅವಶ್ಯಕತೆ ಇರಲಿಲ್ಲ. ಆದ್ದರಿಂದ, ಬರೀ ಬಾವಿಗಳನ್ನು ತೋಡಿದರೆ ಆಗುವುದಿಲ್ಲ, ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕಾಗುತ್ತದೆ. ಪಂಜಾಬ್, ಹರಿಯಾಣ ರಾಜ್ಯಗಳಲ್ಲಿರತಕ್ಕ ಆಹಾರ ವ್ಯವಸೆಯನ್ನು ತಾವು ನೋಡಿರಬಹುದು. ಅಲ್ಲಿ, ಮುಖ್ಯಮಂತ್ರಿಗಳು ತಾವೇ ಸ್ವತಃ ನಿಂತುಕೊಂಡು ನೀರಾವರಿ ಬಾವಿಗಳನ್ನು ತೋಡಿಸಿ ಆ ದೇಶವನ್ನು ಸಮೃದ್ಧವನ್ನಾಗಿ ಮಾಡಿದ್ಧಾರೆ.

೬—೨೦ ಪಿ ಎಂ.

ಬಾವಿಗಳನ್ನು ತೋಡಿಸಿ ನೀರಾವರಿಯನ್ನು ಸಮೃದ್ಧಿಯಾಗಿ ಮಾಡಿದ ಮೇಲೆ ಅವರು ಕೈಗಾರಿಕೆಯಲ್ಲಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಲ್ಲಿನ ಪಿ.ಎ.ಸಿ.ಯವರು ಮಾತನಾಡುವಾಗ ಕರ್ನಾಟಕ ರಾಜ್ಯದಲ್ಲಿ ಉತ್ಪನ್ನವಾಗತಕ್ಕ ಸ್ಟೀಲ್ ಮತ್ತು ಕಬ್ಬಿಣವನ್ನು ನಾವು ಕೊಂಡು ಉಪಕರಣಗಳನ್ನು ಮಾಡಿ ಪುನಃ ಕರ್ನಾಟಕಕ್ಕೆ ಮಾರುತ್ತೇವೆ, ಇದರಿಂದ ೧೨೫ ಪರ್ಸೆಂಟ್ ಲಾಭ ಬರುತ್ತದೆ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕ ಕಬ್ಬಿಣ ಮತ್ತು ಸ್ಟೀಲ್ ಬಾಂಬೆ, ರಾಜಾಸ್ಥಾನ ಮತ್ತು ಪಂಜಾಬಿಗೆ ಹೋಗಿ ಅಲ್ಲಿ ಅದೇ ಕಬ್ಬಿಣ ಮತ್ತು ಸ್ಟೀಲ್‌ನಿಂದಾದ ಉಪಕರಣಗಳನ್ನು ನಾವು ಇಲ್ಲಿ ೧೦೦ ರಷ್ಟು ಬೆಲೆ ಕೊಟ್ಟು ಕೊಳ್ಳುತ್ತಿದ್ದೇವೆ. ಇದು ಏತಕ್ಕೆ ? ಜಲಸಂಪತ್ತು ನಿಮ್ಮ ಯಾರ ಪ್ರಯತ್ನದಿಂದ ಆದದ್ದಲ್ಲ. ಅಣೆಕಟ್ಟು ಕಟ್ಟಿ ಮಾಡಿದ್ದಲ್ಲ ಅದು ನಿಸರ್ಗದತ್ತವಾದ ಸಂಪತ್ತು. ಅದೇ ರೀತಿ ಖನಿಜಸಂಪತ್ತು ಕೂಡ, ಈ ಸಂಪತ್ತನ್ನು ನಾವು ಬಳಸಿಕೊಳ್ಳುವುದರಲ್ಲಿ ವಿಫಲರಾಗಿದ್ದೇವೆಂದ ಮೇಲೆ ಈ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು ಇದು ದುರ್ದೈವ. ಕೋಟ್ಯಾಂತರ ರೂಪಾಯಿಗಳ ಉತ್ಪಾದನೆ ಬರತಕ್ಕ ಖನಿಜಸಂಪತ್ತನ್ನು ನೋಡಿಕೊಳ್ಳುವ ಇಲಾಖೆಯನ್ನು auxiliary department – ಮಾಡಿಕೊಂಡು ಪ್ರಮುಖವಾದ ಇಲಾಖೆಯ ಜೊತೆ ಸಹಾಯಕ ಇಲಾಖೆಯನ್ನಾಗಿ ಮಾಡಿದ್ದಾರೆ. ಖನಿಜ ಇಲಾಖೆಗೆ ಪ್ರತ್ಯೇಕವಾದ ಮಂತ್ರಿ ಇದು ಆ ಇಲಾಖೆ ಸಮರ್ಪಕವಾಗಿ ಕೆಲಸ ಮಾಡಿದರೆ ಈಗ ಜನರ ಮೇಲೆ ಹೊರಿಸುತ್ತಿರುವ

ನೂರಾರು ಪಾಲು ತೆರಿಗೆ ಹಣವನ್ನು ತಪ್ಪಿಸಬಹುದು. ನಿಸರ್ಗಸಂಪತ್ತಿನ ಸದುಪಯೋಗದಿಂದ ಆ ಹಣವನ್ನು ಪಡೆಯಲು ಸಾಧ್ಯವಿದೆ, ಆದರೆ ಆ ದಿಕ್ಕಿನಲ್ಲಿ ಪ್ರಯತ್ನ ನಡೆಯುತ್ತಿಲ್ಲ. ಇದಕ್ಕೆ ಈ ಇಲಾಖೆಯನ್ನು ಸರ್ಕಾರ ಕಡೆಗಣಿಸಿರುವುದೇ ಕಾರಣ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೆಳಗಾಂ ವಿಭಾಗದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ತಾಮ್ರದ ಅದುರಿದೆ ಎಂದು ತನಿಖೆ ಮಾಡಿ ಒಬ್ಬ ತಜ್ಞರು ವರದಿ ಕೊಟ್ಟಿದ್ದಾರೆ. ಇವತ್ತು ತಾಮ್ರದ ಅದುರನ್ನು ತೆಗೆಯಬೇಕಾದರೆ ಭೂಮಿಯನ್ನು ಅಗೆಯಬೇಕಾದ ಅಗತ್ಯವಿಲ್ಲ. ಅದಕ್ಕೆ ಹೊಸ ಪದ್ಧತಿ ಬಂದಿದೆ. ಅಟಾಮಿಕ್ ಎನರ್ಜಿಯನ್ನು ಉಪಯೋಗ ಮಾಡಿ ಬೋರ್ ತೆಗೆದು ಬಾಂಬ್ ಹೊಳಗೆ ಇಟ್ಟರೆ ೧೫೦ ಮೈಲಿಯವರೆಗೆ ಇರತಕ್ಕ ಖನಿಜವನ್ನು ಗಟ್ಟಿ ಮಾಡಿ ಹೊರಗೆ ತೆಗೆಯಂತಕ್ಕ ಪದ್ಧತಿಯನ್ನು ರೂಪಿಸಬೇಕು, ಆ ರೀತಿ ಪ್ರಯೋಗ ಮಾಡಿ ಮಾಡಬಹುದು. ನಮ್ಮ ರಾಜ್ಯದಲ್ಲಿರತಕ್ಕ ಕೋಲಾರ ಗಣಿಯಲ್ಲಿ ೧೦ ಸಾವಿರ ಅಡಿ ಕೆಳಗೆ ೨೫ ಸಾವಿರ ಜನರು ಇಳಿದು ಕೆಲಸ ಮಾಡುತ್ತಿದ್ದಾರೆ, ಆ ೨೫ ಸಾವಿರ ಜನರನ್ನು ಎಂದು ಮೇಲಕ್ಕೆ ಸುತ್ತೀರೋ ಗೊತ್ತಿಲ್ಲ. ಹಳೇ ಪದ್ಧತಿಗೇ ಕೋಟ್ಯಾಂತರ ರೂಪಾಯಿಗಳನ್ನು ಹಾಕುತ್ತಿದ್ದೀರಿ. ಹೊಸದಾದ ಪದ್ಧತಿಯನ್ನು ಅಳವಡಿಸಿಕೊಂಡು ಅಧಿಕವಾಗಿ ಖನಿಜಸಂಪತ್ತು ಮತ್ತು ಜಲಸಂಪತ್ತನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಆದ್ದರಿಂದ ಹೊಸ ಪದ್ಧತಿಯನ್ನು ಅಳವಡಿಸಿಕೊಂಡು ಖನಿಜಸಂಪತ್ತನ್ನು ಸದುಪಯೋಗಪಡಿಸಿಕೊಳ್ಳತಕ್ಕ ಕೆಲಸ ಆಗಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಅರಣ್ಯ ಇಲಾಖೆ ಬಗ್ಗೆ ಹೇಳುತ್ತೇನೆ. ಅರಣ್ಯರೋದನ ಈಗ ಹೆಚ್ಚಾಗಿದೆ. ಇದರ ಬಗ್ಗೆ ನನ್ನ ಮಿತ್ರರು ಹೇಳುತ್ತಾ ನಾವು ಈ ಬಗ್ಗೆ ವರದಿ ಕೊಟ್ಟಿದ್ದರೂ ಅದರ ಪರಿಣಾಮ ಏನೂ ಆಗಿಲ್ಲ. ನಾವು ವರದಿಯಲ್ಲಿ ಹೇಳಿರುವಂತೆ ಒಪ್ಪಿಕೊಂಡಿದ್ದರೆ ರಾಜ್ಯಕ್ಕೆ ೧೭ ಕೋಟಿ ರೂಪಾಯಿ ಆದಾಯ ಬರುತ್ತಿತ್ತು, ಈಗ ಆದಾಯ ೬ ಕೋಟಿ ರೂಪಾಯಿ ಬರುತ್ತಿದೆ ಎಂದು ಹೇಳಿದರು. ವಾಸ್ತವಿಕವಾಗಿ ಆದಾಯವನ್ನು ನೋಡಿದರೆ ಆದಾಯಕ್ಕಿಂತ ಖರ್ಚೇ ಹೆಚ್ಚಾಗ ಆಗುತ್ತಿದೆ. ಅಂದರೆ ನಷ್ಟ ಜಾಸ್ತಿಯಾಗುತ್ತಿದೆ. ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಒಂದು ಟನ್ ಮರ ಬೆಳೆಸುವುದಕ್ಕೆ ೬೫ ರೂಪಾಯಿನಿಂದ ೨೧೫ ರೂಪಾಯಿವರೆಗೆ ಖರ್ಚು ಮಾಡುತ್ತಿದ್ದೀರಿ, ನಮ್ಮ ಲೆಕ್ಕದ ಪ್ರಕಾರ ಒಂದು ಟನ್ ಬೆಳೆಯುವುದಕ್ಕೆ ೩೪೦ ರೂಪಾಯಿ ಆಗುತ್ತದೆ.

ಶ್ರೀ ಜಿ. ಮಾದೇಗೌಡ.—೨೪ ರೂಪಾಯಿನಂತೆ ಮಾಡಿದರೆ......

ಶ್ರೀ ಹೆಚ್. ಗಂಗಾಧರನ್.—೨೪ ರೂಪಾಯಿನಂತೆ ಮಾಡಿ ಅವರು ಹಡಗು ತಿಂದಿದ್ದರೆ ನೀವು ಲಾರಿ ತಿನ್ನುವ ಪ್ರಯತ್ನ ಮಾಡುತ್ತಿದ್ದೀರಿ. My blame is not against an individual. Whichever be the Goverument, whichever the man he may be, I blame the entire Congress Government which is responsible for ruining the profit of this State. ತಾವು ಇದನ್ನೆಲ್ಲಾ ಮಾಡಿದ್ದು ಎಂದು ಹೇಳುವುದಿಲ್ಲ. ಪಾಪ, ನಿಮಗೆ ಇದನ್ನು ಮಾಡುವ ಅಧಿಕಾರ ಇಲ್ಲ. ನೀವೆಲ್ಲಾ ಯಾರದೋ ಅಧೀನದಲ್ಲಿದ್ದೀರಿ. ಡೆಲ್ಲಿಯಿಂದ ಬಂದಂಥ ಪ್ರಭಾವಕ್ಕೆ ಒಳಗಾಗಿ ಎಲ್ಲದಕ್ಕೂ ರುಜು ಹಾಕುತ್ತಿದ್ದೀರಿ. ಇದು ಮೊದಲಿನಿಂದ ನಡೆದು ಬಂದಿದೆ. ೨೪ ರೂಪಾಯಿಗೆ ಕೊಟ್ಟು......

ಶ್ರೀ ಜಿ. ಮಾದೇಗೌಡ.—ನಮ್ಮನ್ನೇನು ಗುಲಾಮರು ಎಂದು ತಿಳಿದುಕೊಂಡಿದ್ದೀರಾ ? ನಾವು ಯಾರಿಗೂ ಈಲ್ಡ್ ಆಗಿಲ್ಲ. ನಮ್ಮನ್ನು ಯಾರಿಗೂ ಮಾರಿಕೊಂಡಿಲ್ಲ. ನಮಗೆ ಸ್ವಾತಂತ್ರ್ಯ ಇದೆ. ನಮಗೆ ಒಂದು ಕಾರ್ಯದ ಚೌಕಟ್ಟಿದೆ, ನೀತಿ, ನಿಯಮ ಇದೆ, ಧರ್ಮ ಇದೆ. ಆ ಚೌಕಟ್ಟಿನಲ್ಲಿ ಕೆಲಸ ಮಾಡುವವರು ನಾವು ಅದಕ್ಕೆ ಅವಕಾಶ ಇಲ್ಲದಿದ್ದಾಗ ಈ ಜಾದಲ್ಲಿ ಇರುವುದಕ್ಕೆ ನಾವು ತಯಾರಿಲ್ಲ. ಇದನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಮಾತನಾಡಿ.

ಶ್ರೀ ಹೆಚ್. ಗಂಗಾಧರನ್.—ಇದಕ್ಕೆ ಅನೇಕ ನಿದರ್ಶನಗಳಿವೆ. ನೀವು ಎಷ್ಟರಮಟ್ಟಿಗೆ ಸ್ವತಂತ್ರರಾಗಿ ಕೆಲಸ ಮಾಡಬಲ್ಲರಿ ಎಂಬುದು ನನಗೆ ಗೊತ್ತು. ನೀವೇ ನಿಮ್ಮ ಸರ್ಕಾರವೇ ನೇಮಿಸಿದಂಥ ಸಮಿತಿ ವರದಿಯನ್ನು ಕಡೆಗಣಿಸಿ ೧೦೫ ರೂಪಾಯಿಗೆ ಮಾಡಿದರಲ್ಲಾ ಯಾರ ಪ್ರಭಾವಕ್ಕೆ ಒಳಗಾಗಿ ಮಾಡಿದಿರಿ.

ಶ್ರೀ ಜಿ. ಮಾದೇಗೌಡ.—ಉತ್ತರ ಹೇಳುತ್ತೇನೆ. ಡೆಲ್ಲಿಯವರು ಹೇಳಿದಹಾಗೆ ಕೇಳುತ್ತೀರಿ ಎಂದು ನೀವು ಹೇಳಿದಿರಲ್ಲಾ ನಾವು ಆ ರೀತಿ ಯಾರಿಗೂ ಮಾರಿಕೊಂಡಿಲ್ಲ. ಆ ರೀತಿ ಹೇಳಬೇಡಿ.

ಶ್ರೀ ಹೆಚ್. ಗಂಗಾಧರನ್.—ನೀವು ಅಧೀನರು, ಗುಲಾಮರು ಎಂದು ಹೇಳುವುದಿಲ್ಲ. ಇವತ್ತು ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಹೀಗಿದೆ ಎಂದು ಹೇಳುತ್ತಿದ್ದೇನೆ. ಒಬ್ಬ ವ್ಯಕ್ತಿ ಏಳು ಎಂದರೆ ಏಳಬೇಕು ಕೂತ್ಕೋ ಎಂದರೆ ಕೂತ್ಕೋಬೇಕು. ಪ್ರಮುಖವಾದ ನೀತಿಗಳನ್ನು ರಾಜ್ಯ ಸರ್ಕಾರಗಳು ಸ್ವತಂತ್ರವಾಗಿ ರೂಪಿಸಲು ಮತ್ತು ಸ್ವತಂತ್ರವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಹಾಗಿದ್ದರೆ ೧೭ ಕೋಟಿ ರೂಪಾಯಿ ಆದಾಯ ಬರತಕ್ಕದ್ದನ್ನು ಏತಕ್ಕಾಗಿ ತಪ್ಪಿಸಿದ್ದೀರಿ. ರೈತರು ೧೦ ರೂಪಾಯಿ, ೨೦ ರೂಪಾಯಿ ತೆರಿಗೆ ಕೊಡಲಿಲ್ಲ ಎಂದರೆ ಅವನ ಮನೆ ಜಪ್ತಿ ಮಾಡಿ ತಟ್ಟೆ ಬಟ್ಟೆಗಳನ್ನು ತೆಗೆದು ಹೊರಕ್ಕೆ ಹಾಕುತ್ತೀರಿ. ಆದರೆ ಕೇವಲ ೨೦ ಜನ ಶ್ರೀಮಂತರ ಮನೆ ಬೆಳಸು ವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಬಿಟ್ಟಿದ್ದೀರಿ. ನಿಮ್ಮ ಅಧಿಕಾರಿಗಳು ಕೊಟ್ಟ ವರದಿಗೆ ಬೆಲೆ ಇಲ್ಲವೆ ? ಅವರೇನು ಬುದ್ಧಿವಂತರಲ್ಲವೆ ? ಅವರ ವರದಿಗೆ ಏನು ಬೆಲೆ ಕೊಟ್ಟಿರಿ ? ನೀವೇನೂ ಅವರಿಗಿಂತ ತಜ್ಞರಲ್ಲ. I can challenge that none of the Ministers is competent to change their technical knowledge.

ಶ್ರೀ ವೈ. ರಾಮಕೃಷ್ಣ.—ಅದು ತಮ್ಮ ಅಭಿಪ್ರಾಯ.

SRI H. GANGADHARAN.—No Cabinet Minister has got the technical knowledge here. Then How can you decide that ?

ಶ್ರೀ ಪಿ. ವೆಂಕಟರಮಣ.—ಯಾವ ಟೆಕ್ನಿಕಲ್ ನಾಲೆಡ್ಜ್ ಗೊತ್ತು ನಿಮಗೆ ?

ಶ್ರೀ ಹೆಚ್. ಗಂಗಾಧರನ್.—ನಿಮ್ಮ ಟೆಕ್ನಿಕಲ್ ನಾಲೆಡ್ಜ್ ಗೊತ್ತು, ಸೈನ್ಸ್ ಆಫ್ ಫಾರೆಸ್ಟ್ರಿ ಯಾರು ಓದಿದ್ದಾರೋ, ಯಾರು ಅದರಲ್ಲಿ ತಜ್ಞತೆಯನ್ನು ಪಡೆದಿದ್ದಾರೋ ಅವರು ಕೊಟ್ಟ ವರದಿಯನ್ನು ತಿರಸ್ಕಾರ ಮಾಡಿದ್ದೀರಲ್ಲ ಅವರಿಗಿಂತ ಹೆಚ್ಚಿನ ನಾಲೆಡ್ಜ್ ನಿಮಗೇನಿದೆ ? ಒಂದು ಟನ್ ಬೆಳೆಸುವುದಕ್ಕೆ ೩೩೩ ರೂಪಾಯಿ ಖರ್ಚಾಗುತ್ತದೆ ಎಂದು ನೀವೇ ಉತ್ತರ ಕೊಟ್ಟಿರಿ. ಹಾಗಾದರೆ ನೀವು ನಷ್ಟಕ್ಕೆ ಏತಕ್ಕೆ ಕೊಟ್ಟಿರಿ ?

ಶ್ರೀ ಜಿ. ಮಾದೇಗೌಡ.—ನಷ್ಟವೋ ಲಾಭವೋ ನಾಳೆ ಹೇಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ನಷ್ಟ ಎಂದು ಹೇಳುವುದಿಲ್ಲ ನಾನು. ರಾಜ್ಯದ ಜನರ ಲೂಟಿ, ಶೋಷಣೆಯಾಗಿದೆ.

ಶ್ರೀ ಜಿ. ಮಾದೇಗೌಡ.—೨೪ ರೂಪಾಯಿಗೆ ಕೊಟ್ಟಾಗ ನೀವು ಎಲ್ಲಿ ಹೋಗಿದ್ದಿರಿ ?

ಶ್ರೀ ಎಚ್. ಗಂಗಾಧರನ್.—ನಾನು ಆಗ ವಿಧಾನಸಭಾ ಸದಸ್ಯನಾಗಿರಲಿಲ್ಲ.

ಶ್ರೀ ಜಿ. ಮಾದೇಗೌಡ.—ನೀವು ಬಂದಮೇಲೆ ಏನು ಮಾಡಿದಿರಿ ?

ಶ್ರೀ ಎಚ್. ಗಂಗಾಧರನ್.—ನನಗೆ ಅವಕಾಶ ಕೊಟ್ಟರೆ ಹ್ಯಾಂಗ್ ಮಾಡಿಸುತ್ತೇನೆ.

SRI G MADEGOWDA.—At no time you have questioned this. At least it is I and our Government have collected Rs. 205 for the first time. No Government for the past 25 years have collected. You must congratulate this Government.

ಶ್ರೀ ಎಚ್. ಗಂಗಾಧರನ್.—ತಾವು ಮಾಡಿದ್ದರೂ ಕೂಡ ಅದು ಡೆಲ್ಲಿಯ ಪ್ರಭಾವದ ಮೇಲೆ ಆಗಿರುವುದು. ಅಲ್ಲಿಯ ಪ್ರಭಾವದ ಮೇಲೆ ನೀವು ಮಾಡಿದ್ದೀರಿ. ಯಾರೇ ದ್ರೋಹ ಮಾಡಿದ್ದರೂ ಅದು ತಪ್ಪೆ. ಅವರು ಯಾರೇ ಆಗಿರಲಿ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಸ್ವಾಮಿ, ಮಂತ್ರಿಗಳು ಸಂಬಂಧಪಟ್ಟ ಖಾತೆಗಳ ಬಗ್ಗೆ ಮತ್ತು ವಿಷಯಗಳ ಬಗ್ಗೆ ತಜ್ಞತೆಯನ್ನು ಪಡೆದಿರುವವರಾಗಿರಬೇಕೆಂದು ಮಾನ್ಯ ಗಂಗಾಧರನ್‌ರವರು ಹೇಳು ತ್ತಿದ್ದಾರೆ. ಮಂತ್ರಿಗಳಾಗುವವರಿಗೆ ತಜ್ಞತೆ ಏನೂ ಬೇಕಿಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ನಡೆಸುವು ದಕ್ಕೆ ಮಂತ್ರಿಗಳು ತಜ್ಞತೆಯನ್ನು ಪಡೆಯಬೇಕಾಗಿಲ್ಲ.

ಶ್ರೀ ಬಿ. ಭಾಸ್ಕರನಾಯ್ಡು.—ಸ್ವಾಮಿ, ೬-೩೦ ಆಯಿತು.

MR. SPEAKER.—Please tell me how much time you want.

SRI H. GANGADHARAN.—I require another 15 minutes Sir.

MR. SPEAKER.—You can take another 10 minutes tomorrow. Now we shall take up the next item in the agenda ie., Half-An. Hour Discussion. Sriyuths Prabhakar R Telkar, K. Bhaskar Naidu, M. Ganganna, R. Ambanna Naik and D.T. Ramu to raise half-an-hour discussion on the matters arising out of replies given to Starred Question No. 424 (251) of 36th List on 28th June, 1982 regarding working of Karnataka State Backward Classes and Minorities Financial Corporation.

Now I call upon hon. Member Sri Prabhakar Telkar to begin the discussion. ತಾವು ಯಾವಾಗಲೂ ಕಾಲವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವುದು ಒಳ್ಳೆಯದು.

Half-an-hour Discussion

Reg :—Working of Karnataka Backward Classes and Minorities Financial Corporation.

SRI PRABHAKAR TELKAR.—Sir, I want to bring to the notice of this House the working of the Karnataka State Backward Classes & Minorities Financial Corporation. The replies that have been given to my question No. 423 is as follows : My first question was-Whether the Karnataka Backward Classes & Minorities Corporation is functioning and if so, since when. To this the reply is 'Yes' since 28th October 1977. To my second question that the financial assistance given by the Karnataka Backward Classes and Minorities for the year 1978-79, 1979-80 and 1981-82. The answer is 1978-79—Nil. No amount has been spent. 1979-80—they have spent Rs. 1.50 lakhs, 1980-81—Rs. 3.55 lakhs and in 1981-82 Rs. 13.80 lakhs has been spent. Sir, looking to these figures I should say that the department has given a rosy picture regarding working of this Corporation. This corporation has contemplated schemes for extending loans in collaboration with banks to persons belonging to backward classes in small scale industries, cottage industries etc., The economic upliftment programmes implemented by the department of Backward Classes and Minorities are as follows :

(i) Self employment for the youths of Backward Classes in getting training in Autorikshaw/Car/Tractor Driving.

(ii) Tailoring Training for Women belonging to Backward Classes.

(iii) Extending financial assistance to individual farmers for enrolment as members in Primary Co-operative Societies/ P.L.D. Banks.